


ಶ್ರೀಮತಿ ಎಂ. ಲಿಂಗೇಗೌಡರು ಮತ್ತು ಧರ್ಮಪತ್ನಿ ಶ್ರೀಮತಿ ತಾಯಮ್ಮನವರು




ಶ್ರೀ ಎಂ. ಲಿಂಗೇಗೌಡರು
ವಾಸಿಸುತ್ತಿದ್ದ ಮನೆಯ ಚಿತ್ರ




ಶ್ರೀ ಎಂ. ಲಿಂಗೇಗೌಡರು
ವಿಶ್ರಾಂತಿ ಪಡೆಯುತ್ತಿದ್ದ ಕೊಠಡಿ



ಕನಕಪುರದ ಮನೆ ಮುಂದೆ
ಮಕ್ಕಳು ಆಡುತ್ತಿರುವ ಚಿತ್ರ




ಶ್ರೀಯುತ ಎಂ. ಲಿಂಗೇಗೌಡರ ಹಿರಿಯ ಸಹೋದರ
ಶ್ರೀ ಮಂಚೇಗೌಡ ಮತ್ತು ಅವರ ಪತ್ನಿ



ಶ್ರೀಯುತ ಎಂ. ಲಿಂಗೇಗೌಡರ ಕಿರಿಯ ಸಹೋದರ
ಶ್ರೀ ಎಂ.ಸಿ. ನಾಗೇಶ್ ಮತ್ತು ಶ್ರೀಮತಿ ಸರೋಜಮ್ಮ




ಶ್ರೀಯುತ ಎಂ. ಲಿಂಗೇಗೌಡರು ಬಾಲ್ಯದಿಂದ ಶಾಸಕರಾಗಿರುವವರೆಗೆ ಅಪ್ಪಟ ಮಣ್ಣಿನ ಮಗನಾಗಿದ್ದಾಗ ಪ್ರತಿ ವರ್ಷ ಆಚರಿಸುತ್ತಿದ್ದ ಸಂಕ್ರಾಂತಿ ಹಬ್ಬದ ಸಡಗರದ ಮಧ್ಯೆ ಕಿರಿಯ ಸಹೋದರ ಎಂ.ಸಿ. ನಾಗೇಶ್‌ರವರ ಮಗ ಎಂ.ಎನ್. ಮಂಜುನಾಥ್‌ರವರು ಅಲಂಕರಿಸಿದ ಗೋವುಗಳ ಮಧ್ಯೆ ನಿಂತಿರುವ ಚಿತ್ರ.



ಶ್ರೀ ಎಂ. ಲಿಂಗೇಗೌಡರ ಹಿರಿಯ ಮಗ ಶ್ರೀ ಎಂ.ಎಲ್. ನಾಗರಾಜ
ಮತ್ತು ಸೊಸೆ ಶ್ರೀಮತಿ ಪಾರ್ವತಮ್ಮ.



2ನೇ ಮಗ ಶ್ರೀ ಎಂ.ಎಲ್. ರಮೇಶ್ ಮತ್ತು ಕುಟುಂಬ



3ನೇ ಮಗ ಶ್ರೀ ಎಂ.ಎಲ್. ಹೇಮಚಂದ್ರ ಮತ್ತು ಕುಟುಂಬ



4ನೇ ಮಗ ಶ್ರೀ ಎಂ.ಎಲ್. ಕೃಷ್ಣ ಮತ್ತು ಕುಟುಂಬ



5ನೇ ಮಗ ಶ್ರೀ ಎಂ.ಎಲ್. ಶಿವಕುಮಾರ್ ಮತ್ತು ಕುಟುಂಬ




ಹಿರಿಯ ಮಗಳು ಶ್ರೀಮತಿ ಯಶೋದಮ್ಮ ಮತ್ತು ಕುಟುಂಬ



ಶ್ರೀ ಎಂ. ಲಿಂಗೇಗೌಡರ ಕಿರಿಯ ಮಗಳು
ಶ್ರೀಮತಿ ಹಂಸವತಿ ಮತ್ತು
ಕುಟುಂಬದ ಚಿತ್ರ




ಹಿರಿಯ ಮಗ
ಶ್ರೀ ಎಂ.ಎಲ್. ನಾಗರಾಜುರವರ
ಮದುವೆಗೆ ಬಂದಿದ್ದ
ಮಾನ್ಯ ಮುಖ್ಯ ಮಂತ್ರಿ
ಶ್ರೀ ಕೆಂಗಲ್ ಹನುಮಂತಯ್ಯನವರು
ಮತ್ತು ಗೌಡರ ಅಭಿಮಾನಿಗಳ ಚಿತ್ರ.



ಶ್ರೀಯುತ ಎಂ. ಲಿಂಗೇಗೌಡರು ಕನಕಪುರ ಕ್ಷೇತ್ರದ ಶಾಸಕರಾಗಿದ್ದಾಗ
ಕಟ್ಟಿಸಿದ್ದ ಪುರಸಭಾ ಪ್ರೌಢಶಾಲೆಯ ಪ್ರಾರಂಭೋತ್ಸವಕ್ಕೆ
ಆಗಮಿಸಿದ್ದ ಪೌರಾಡಳಿತ ಮಂತ್ರಿಗಳ ಸಹಯೋಗದೊಂದಿಗಿನ ಚಿತ್ರ.



ಶ್ರೀಯುತ ಎಂ. ಲಿಂಗೇಗೌಡರ ಸಹ ಕುಟುಂಬ ಪರಿವಾರ ಚಿತ್ರ.



M. Lingegowda

MEMBER,

MYSORE LEGISLATIVE ASSEMBLY.

Kanakapura.

This is to certify that Sri M.K. Shivaramiah is known to me ever since his birth, since he happens to be one of my cousin brothers. His conduct and character are good.

M. Lingegowda

4/4/58

[M. Lingegowda]

ಶ್ರೀಯುತ ಎಂ. ಲಿಂಗೇಗೌಡರ ಹಸ್ತಾಕ್ಷರ



ಶುಭ ಹಾರೈಕೆ

ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಶಾಸಕರು, ಕನಕಪುರ ಕ್ಷೇತ್ರ
ಮಾಜಿ ಇಂಧನ ಸಚಿವರು

"ಮರೆಯದ ಮಾಣಿಕ್ಯ ಅಭಿನಂದನ ಗ್ರಂಥ"

ಕೀರ್ತಿ ಶೇಷರಾಗಿ ಚಿರಶಾಂತಿಯಲ್ಲಿರುವ ಕನಕಪುರ ಕ್ಷೇತ್ರದ ಮಾಜಿ ಶಾಸಕರಾದ ಶ್ರೀಯುತ ಎಂ. ಲಿಂಗೇಗೌಡ ಬಿ.ಎ., ಇವರು ಮತ್ತು ಪೂಜ್ಯ ಶ್ರೀ ಎಸ್. ಕರಿಯಪ್ಪನವರು ಅಗ್ರಗಣ್ಯರಾಗಿದ್ದರು. ಕರಿಯಪ್ಪನವರು ಶಿಕ್ಷಣ ಕ್ಷೇತ್ರ ಮತ್ತು ತಾಲ್ಲೂಕಿನ ಅಭಿವೃದ್ಧಿಗೆ ಅಮೂಲಾಗ್ರ ಯೋಜನೆಗಳನ್ನು ತಂದು ಸಾರ್ಥಕ ಸೇವೆ ಮಾಡಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಗ್ರಾಮ ವಿದ್ಯಾ ಪ್ರಚಾರಕ ಸಂಘವನ್ನು ಸ್ಥಾಪಿಸಿ, ತಾಲ್ಲೂಕಿನ ನಾಡಿನ ವಿವಿಧ ಜಿಲ್ಲೆಗಳ ವಿದ್ಯಾರ್ಥಿಗಳು ಬಂದು ವಿದ್ಯಾರ್ಥಿನಿಲಯದಲ್ಲಿ ನೆಲೆಸಿ ಜ್ಞಾನಾರ್ಜನೆ ಮಾಡಲು ಅನುವು ಮಾಡಿಕೊಟ್ಟ ಪುಣ್ಯ ಪುರುಷರು.

ಪೂಜ್ಯ ಕರಿಯಪ್ಪನವರಂತೆ ಕೀರ್ತಿ ಶೇಷರಾದ ಶ್ರೀ ಎಂ. ಲಿಂಗೇಗೌಡರು ಕನಕಪುರ ಕ್ಷೇತ್ರದ ಶಾಸಕರಾಗುವುದಕ್ಕೆ ಮುನ್ನ ಅವರು ಹಂತ ಹಂತವಾಗಿ ಅಲಂಕರಿಸಿದ್ದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಕನಕಪುರದ ಭೂ ಅಭಿವೃದ್ಧಿ ನಿಗಮ, ವ್ಯವಸಾಯ ಸೇವಾ ಸಹಕಾರ ಸಂಘ, ಮುಖ್ಯವಾಗಿ ಕನಕಪುರ ಪುರಸಭಾ ಅಧ್ಯಕ್ಷರಾಗಿದ್ದಾಗ ಪಟ್ಟಣ ಅಭಿವೃದ್ಧಿಗಾಗಿ ಹಾಕಿಕೊಂಡ ವಿವಿಧ ಯೋಜನೆ, ಕಾಂಕ್ರೀಟ್ ರಸ್ತೆ, ಪುರಸಭಾ ಪ್ರೌಢಶಾಲೆ, ವಿವಿಧ ಬಡಾವಣೆಗಳು, ಚರಂಡಿ, ರಸ್ತೆ, ಕುಡಿಯುವ ನೀರಿಗಾಗಿ ದೊಡ್ಡ ಬೀದಿ ಬಡಾವಣೆ ಮತ್ತು ಮೇಗಳ ಬೀದಿ ಬಡಾವಣೆಗಳಲ್ಲಿ ಎತ್ತರದ ನೀರಿನ ಕಟ್ಟೆಗಳನ್ನು ಕಟ್ಟಿಸಿ ಕನಕಪುರ ಪಟ್ಟಣದ ಜನತೆಗೆ ನೀರಿನ ಬವಣೆಯನ್ನು ತಪ್ಪಿಸಿದ್ದರು. ಸರ್ಕಾರದಿಂದ ಪಡೆದ ಭೂಮಿಯಿಂದ ಬಡಾವಣೆಗಳಲ್ಲಿ ನಿವೇಶನಗಳನ್ನು ವಿಂಗಡಿಸಿ, ನಿವೇಶನ ಮತ್ತು ಮನೆಗಳಿಲ್ಲದ ಬಡವರಿಗೆ ರಿಯಾಯಿತಿ

ದರದಲ್ಲಿ ನಿವೇಶನ ಕೊಟ್ಟು, ಮನೆಗಳನ್ನು ಕಟ್ಟಿಕೊಳ್ಳಲು ಸಾಲ ಸೌಲಭ್ಯ ಮನೆಗಳಿಲ್ಲದ ಬಡವರಿಗೆ ರಿಯಾಯಿತಿ ದರದಲ್ಲಿ ನಿವೇಶನ ಕೊಟ್ಟು, ಮನೆಗಳನ್ನು ಕಟ್ಟಿಕೊಳ್ಳಲು ಸಾಲ ಸೌಲಭ್ಯ ಒದಗಿಸಿಕೊಟ್ಟರು. ಇವರ ಕಾಲದಲ್ಲಿ ಹೊಳೆ ದಾಟಲು ಸೇತುವೆಗಳನ್ನು ನಿರ್ಮಿಸಲು ಶ್ರಮಿಸಿದ್ದರಲ್ಲದೆ, ರೈತರು ಕೃಷಿ ಸಫಲರಾದರು. ಇದಲ್ಲದೆ ತಾಲ್ಲೂಕಿನ ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವಂತಾಗಲು ಶ್ರಮಿಸಿದರು. ಇವರ ಸೇವೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಆಗುತ್ತದೆ. ಶ್ರೀ ಎಂ. ಲಿಂಗೇಗೌಡರು ಹಾಕಿಕೊಟ್ಟ ಉತ್ತಮ ಮಾರ್ಗಸೂಚಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಸೇವೆ ಮಾಡುತ್ತಿದ್ದೇನೆ. ಅವರ ಪರಿಶುದ್ಧವಾದ ಆತ್ಮ ನನ್ನನ್ನು ಸದಾ ಹರಸುತ್ತಿರಲೆಂದು ಬೇಡುತ್ತಾ ಅವರ ಆತ್ಮಕ್ಕೆ ಶಾಂತಿ ಕೋರುತ್ತಿದ್ದೇನೆ.

ಕೀರ್ತಿ ಶೇಷರಾದ ಎಂ. ಲಿಂಗೇಗೌಡರನ್ನು ಕುರಿತಾದ "ಮರೆಯದ ಮಾಣಿಕ್ಯ ಗ್ರಂಥ"ವನ್ನು ಲೇಖಕರು ಗೌಡರು ನಮ್ಮನ್ನಗಲಿ 56 ವರ್ಷಗಳು ಗತಿಸಿದ ನಂತರ ಹಿಂದಿನ ಗತಕಾಲದ ಅವರ ಸೇವೆಯನ್ನು ಸಂಶೋಧನೆ ಮಾಡಿ ಬರೆದಿದ್ದಾರೆ. ಗೌಡರ ಹಿಂದಿನ ಸೇವೆ ಮುಂದಿನ ತಲೆಮಾರಿಗೆ ಮಾರ್ಗಸೂಚಿಯಾಗಿರಲಿ ರಿಚಿದು ಹಾರೈಸುತ್ತಾ ಗೌಡರನ್ನು ಕುರಿತು ಸಮಯೋಚಿತವಾಗಿ ರಚಿಸಲಾಗಿರುವ ಈ ಮರೆಯದ ಮಾಣಿಕ್ಯ ಗ್ರಂಥಕ್ಕೆ ಶುಭ ನುಡಿ ಬರೆದು ಹಾರೈಸುತ್ತಿದ್ದೇನೆ.

ಸಹಿ/–



ಶುಭ ಹಾರೈಕೆ

ಶ್ರೀ ಡಿ.ಕೆ. ಸುರೇಶ್
ಸಂಸದರು
ಬೆಂಗಳೂರು ಗ್ರಾಮಾಂತರ

"ಮರೆಯದ ಮಾಣಿಕ್ಯ ಅಭಿನಂದನ ಗ್ರಂಥ"

ಕೀರ್ತಿ ಶೇಷರಾಗಿ ಚಿರಶಾಂತಿಯಲ್ಲಿರುವ ಶ್ರೀಯುತ ಎಂ. ಲಿಂಗೇಗೌಡ ಬಿ.ಎ ಇವರು ಕನಕಪುರ ಕ್ಷೇತ್ರದಿಂದ ಮೈಸೂರು ಶಾಸನ ಸಭಾ ಸದಸ್ಯರಾಗಿ ಆಯ್ಕೆಯಾದ ಮೇಲೆ ಕ್ಷೇತ್ರಕ್ಕೆ ಸೇವೆ ಸಲ್ಲಿಸುವ ಮುನ್ನ ಅವರು ಅಲಂಕರಿಸಿದ್ದ ಹುದ್ದೆಗಳಲ್ಲಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಕನಕಪುರ ತಾಲ್ಲೂಕಿನ ಅಭಿವೃದ್ಧಿ ನಿಗಮ, ತಾಲ್ಲೂಕು ಬೆಳೆಗಾರರ ಸೇವಾ ಸಹಕಾರ ಸಂಘ, ಕನಕಪುರ ಪಟ್ಟಣದ ಪುರಸಭಾಧ್ಯಕ್ಷ ಸ್ಥಾನವೂ ಒಂದು.

ಮೇಲ್ಕಂಡ ಎಲ್ಲಾ ಹುದ್ದೆಗಳಲ್ಲಿಯು ಅವರು ಜನತೆಗೆ ಮಾಡಿದ ಮನೋಜ್ಞ ಹಾಗೂ ಅಗಣಿತ ಸೇವೆ ಊಹೆಗೂ ನಿಲುಕದ್ದು ಗೌಡರು ಶಾಸಕರಾಗಿದ್ದ ಕಾಲ, ಅದೊಂದು ಸುವರ್ಣಯುಗ ಆಗಿನ ಕಾಲದಲ್ಲಿ ಮತಬಾಂಧವರು ಮುಗ್ಧರಾಗಿದ್ದರು. ಗೌಡರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಅವರ ಜೊತೆ ಬೆರೆತು ಸೇವೆ ಮಾಡುತ್ತಿದ್ದರು ಎಂದು ತಿಳಿದಿದ್ದೇನೆ.

ಗೌಡರು ಕೃಷಿಕ್ಷೇತ್ರ, ಈಜುವ ಕಲೆ, ಜಲಕ್ರೀಡೆಗಳಲ್ಲಿ ಪರಿಣಿತರಾಗಿದ್ದರು ಎಂಬುದನ್ನು ರಚನೆಕಾರರ ಲೇಖನದಲ್ಲಿ ತಿಳಿದಾಗ ಅವರ ಸ್ಪೂರ್ತಿ ಸೆಲೆ ನನ್ನನ್ನು ಆಕರ್ಷಿಸಿದೆ. ಶ್ರೀಯುತ ಗೌಡರು ಮಾಡಿರುವ ಜನಸೇವೆ ಅಮೋಘವಾದದ್ದು. ಅವರು ಹಾಕಿ ಕೊಟ್ಟಿರುವ ಸೇವಾ ಬುನಾದಿಯ ಮೇಲೆ ಇನ್ನೂ ಹೆಚ್ಚಿನ ಜನಸೇವೆ ಮಾಡಬೇಕೆಂಬ ಹಂಬಲ ನನ್ನಲ್ಲಿ ಹೆಚ್ಚಾಗಿದೆ.

ಐವತ್ತಾರು (56) ವರ್ಷಗಳ ಗತಕಾಲದ ಇತಿಹಾಸವನ್ನು ಸಂಶೋಧನೆ ಮಾಡಿ ರಚಿಸಿರುವ ಮರೆಯದ ಮಾಣಿಕ್ಯ ಗ್ರಂಥ ಅದ್ಭುತವಾಗಿದೆ. ಅಲ್ಲದೆ ಇಂದಿನ ರಾಜಕಾರಣಿಗಳಿಗೆ ಮಾರ್ಗದರ್ಶಿಯಾಗಿದೆ.

ಆಗಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರು ಶ್ರೀ ಜಯಚಾಮರಾಜೇಂದ್ರ ಒಡೆಯರಿಗೆ ಗೌಡರ ಬಹುಮುಖ ಪ್ರತಿಭೆಗಳಲ್ಲಿ ಒಂದಾಗಿದ್ದ ಈಜುವ ಕಲೆಯನ್ನು ಕಲಿಸಲು ನೇಮಿಸಿ ಅವರಿಗೆ ಮೈಸೂರಿನ ಕುಕ್ಕರಳ್ಳಿ ಕೆರೆಯಲ್ಲಿ ಈಜು ಕಲಿಸಿದ ಸಂದರ್ಭದಲ್ಲಿ ಗೌಡರಿಗೆ ಸಂಭಾವನೆಯಾಗಿ ಬೆಳ್ಳಿ ಬಿಂದಿಗೆ ಮತ್ತು ಬೆಳ್ಳಿ ಗಟ್ಟಿಯನ್ನು ನೀಡಿದ್ದರು ಎಂಬುದನ್ನು ತಿಳಿದು ಸಂತೋಷವಾಗಿದೆ.

ಮುಂದೆ ಶ್ರೀ ಜಯಚಾಮರಾಜೇಂದ್ರ ಒಡೆಯರು ಶ್ರೀಯುತ ಗೌಡರು ಮೈಸೂರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅವರಿಗೆ ಕುಕ್ಕರಳ್ಳಿ ಕೆರೆಯಲ್ಲಿ ಬಾಳೆ ಎಲೆಯ ಮೇಲೆ ಮಲಗಿ ಈಜಿ ತೋರಿಸಬೇಕೆಂದು ಹಾಕಿದ ಸವಾಲನ್ನು ಸ್ವೀಕರಿಸಿ ಗೆದ್ದು ತೋರಿಸಿದ್ದಕ್ಕಾಗಿ ಗೌಡರಿಗೆ ಶ್ರೀ ಜಯಚಾಮರಾಜೇಂದ್ರ ಒಡೆಯರು ಚಿನ್ನದ ಪದಕವಿದ್ದ ಕಂಠಿಹಾರವನ್ನು ಬಹುಮಾನವಾಗಿ ಕೊಟ್ಟಿದ್ದರು ಎಂಬುದು ಅವಿಸ್ಮರಣೀಯವಾದದ್ದು.

ಗೌಡರು ಬಾಲ್ಯದಿಂದ ಬದುಕಿನುದ್ದಕ್ಕೂ ಅವರು ನಡೆದು ಬಂದ ದಾರಿ ಕ್ಷೇತ್ರದ ಜನತೆಗೆ ಸಲ್ಲಿಸಿದ ನಿಸ್ವಾರ್ಥ ಸೇವೆ ನನ್ನ ಮೇಲೆ ಪರಿಣಾಮ ಬೀರಿದೆ. ಅಲ್ಲದೆ ಅವರ ಸೇವಾ ಕೈಂಕರ್ಯ ಅವರು ರಾಜಕೀಯ ಧುರೀಣರಾಗಿದ್ದು ಸಲ್ಲಿಸಿದ ಸೇವೆ ಸಂಸದನಾದ ನನಗೆ ಹೆಚ್ಚಿನ ಜನಸೇವೆ ಮಾಡಲು ಪ್ರೇರೇಪಿಸಿದೆ.

ಇದೇ ಸಂದರ್ಭದಲ್ಲಿ ರಚಿಸಲಾಗಿರುವ “ಮರೆಯದ ಮಾಣಿಕ್ಯ” ಗ್ರಂಥಕ್ಕೆ ಸಂತಸದಿಂದ ಹಾರೈಸುತ್ತಿದ್ದೇನೆ.

ಸಹಿ/–



ಶುಭ ಹಾರೈಕೆ

ಶ್ರೀ ಎಸ್. ರವಿ
ವಿಧಾನ ಪರಿಷತ್ ಸದಸ್ಯರು
ಕರ್ನಾಟಕ ಸರ್ಕಾರ

"ಮರೆಯದ ಮಾಣಿಕ್ಯ ಅಭಿನಂದನ ಗ್ರಂಥ"

ಕೀರ್ತಿ ಶೇಷರಾಗಿ ಚಿರಶಾಂತಿಯಲ್ಲಿರುವ ಶ್ರೀಯುತ ಎಂ. ಲಿಂಗೇಗೌಡ ಬಿ.ಎ ರವರ ಅವಸಾನದ ದಿನದಂದು ನಾನು ಆರು ವರ್ಷದ ಮಗುವಾಗಿದ್ದೆ. ನನ್ನ ತಂದೆ ಶಂಬೇಗೌಡರು ಮತ್ತು ಅವರ ಗೆಳೆಯರು ಕುಳಿತು ಗೌಡರ ಕೃಷಿಕಾರ್ಯ ಅವರು ಶಾಸಕರಾಗಿದ್ದಾಗ ಮತ್ತು ಕನಕಪುರದ ಭೂ ಅಭಿವೃದ್ಧಿ ನಿಗಮ, ಪುರಸಭಾಧ್ಯಕ್ಷರಾಗಿದ್ದಾಗ ಪಟ್ಟಣದ ಜನತೆಗೆ ಮಾಡಿಕೊಟ್ಟ ಸೇವೆಗಳು ಹಿಂದು–ಮುಸ್ಲಿಂ ಭಾವೈಕ್ಯತೆಗಾಗಿ ಮಸೀದಿ ಹಿಂದೆ ಇದ್ದ ಕಾಳಮ್ಮ ದೇವಸ್ಥಾನಕ್ಕೆ ಬದಲಾಗಿ ಈಗಿನ ಕಲ್ಯಾಣಿ ಪಕ್ಕದಲ್ಲಿ ನಿವೇಶನ ಪಡೆದು, ಕಾಳಿಕಾಂಬ ದೇವಸ್ಥಾನ ಕಟ್ಟಿಸಿ, ವಿಶ್ವಕರ್ಮ ಸಮುದಾಯಕ್ಕೆ ಅರ್ಪಿಸಿದರು ಎಂಬ ವಿಷಯ ಮನವರಿಕೆಯಾಗಿ. ಗೌಡರು ಮಾಡಿರುವ ಸೇವೆಯನ್ನು ಮನದಟ್ಟು ಮಾಡಿಕೊಂಡು ನಾನೂ ಸಹ ಮುಂದೆ ಅವರಂತೆಯೇ ಜನಸೇವೆ ಮಾಡಬೇಕೆಂಬ ಆಸೆ ಆಕಾಂಕ್ಷೆ ಕಾಡುತ್ತಿತ್ತು.

ಪ್ರೌಢಾವಸ್ಥೆಗೆ ಬಂದ ಮೇಲೆ ವಿದ್ಯಾಭ್ಯಾಸ ಮುಗಿಸಿ ಪೂಜ್ಯ ಶ್ರೀ ಎಸ್. ಕರಿಯಪ್ಪನವರು ಹಾಗೂ ಎಂ. ಲಿಂಗೇಗೌಡರ ಸೇವಾ ಮಾರ್ಗವನ್ನನುಸರಿಸಿ ಸೇವೆ ಮಾಡಬೇಕೆನಿಸಿತ್ತು. ಅದಕ್ಕಾಗಿ ಸಮಯ ಸಂದರ್ಭ ಸನ್ನಿವೇಶಕ್ಕಾಗಿ ಸಮಯ ಕಾಯುತ್ತಿದ್ದು, ತಾಲ್ಲೂಕಿನ ಮುತ್ಸದ್ಧಿ ರಾಜಕಾರಣಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ಮತ್ತು ಶ್ರೀ ಡಿ.ಕೆ. ಸುರೇಶ್ ರವರ ಹಿಂಬಾಲಕನಾಗಿ ಅವರ ಆಶೀರ್ವಾದದಿಂದ

ರಾಜಕೀಯಕ್ಕಿಳಿದು ಜನಸೇವೆ ಮಾಡುವ ಅವಕಾಶ ದೊರೆತು ಶಾಸಕಾಂಗ ಪಕ್ಷದ ವಿಧಾನಪರಿಷತ್ತಿನ ಸದಸ್ಯನಾಗಿ ಜನಸೇವೆ ಮಾಡುವ ಭಾಗ್ಯ ಸಿಕ್ಕಿದ್ದು, ಆತ್ಮಪೂರಕವಾಗಿ ಸೇವೆಸಲ್ಲಿಸುತ್ತಿದ್ದೇನೆ. ಗೌಡರು ಈಜುವ ಕಲೆಯಲ್ಲಿ ಪರಿಣಿತರಾಗಿದ್ದು, ಗೆಳೆಯರು ಹಾಕಿದ ಷರತ್ತಿಗೆ ರಾಮನಗರದ ಹಳೆ ಬಸ್ ನಿಲ್ದಾಣದ ಪಕ್ಕದಲ್ಲಿರುವ ಸೇತುವೆಯಿಂದ ಅರ್ಕಾವತಿ ನದಿಗೆ ಜಿಗಿದು (ಧುಮುಕಿ) ಮಲಗಾಳು ಗ್ರಾಮದ ದಡಕ್ಕೆ ಬಂದು ಸೇರಿದ್ದು ಮತ್ತು ವಿರುಪಸಂದ್ರ ಪಕ್ಕದಲ್ಲಿ ಹರಿಯುತ್ತಿದ್ದ ಅರ್ಕಾವತಿ ಹೊಳೆಗೆ ಧುಮುಕಿ ಈಜುತ್ತಾ ಬರುತ್ತಿರುವಾಗ ಪಕ್ಕದಲ್ಲೇ ತೇಲಿ ಬರುತ್ತಿದ್ದ ಹೆಬ್ಬಾವನ್ನು ಮರದ ದಿಮ್ಮಿ ಎಂದು ಭ್ರಮಿಸಿ ತಬ್ಬಿಕೊಂಡು ಬರುತ್ತಿರುವಾಗ ಅದು ಹೊರಳಾಡಿದ್ದನ್ನು ಗಮನಿಸಿ ಸರಿದು ನೋಡಿ ಅದು ಹೆಬ್ಬಾವೆಂದು ತಿಳಿದಾಗ ಅದನ್ನು ರೂಡಿಸಿ ಈಜಿ ಬಂದು ಮಳಗಾಳು ದಡ ಸೇರಿದ್ದು ರೋಮಾಂಚನಕಾರಿ ಸಾಹಸವೇ ಸರಿ.

ಇಂಥ ಅಭೂತಪೂರ್ವ ಘಟನೆಗಳನ್ನು ಸಂಶೋಧನೆ ಮಾಡಿ ಸಂಶೋಧಿಸಿದ ವಿಷಯಗಳನ್ನು ಚಿನಿವಾರರ ಕುಲುಮೆಯ ಮೂಸೆಯಲ್ಲಿ ಕುದಿಸಿ ಕೃತಿಗೆ ಹೊಳಪು ತಂದಿದ್ದಾರೆ. ಇದು ಲೇಖರ ಶ್ರದ್ಧಾಪೂರಕ ಪ್ರಯತ್ನಕ್ಕೆ ಹಿಡಿದ ಕನ್ನಡಿಯಾಗಿದೆ.

ಇಂಥ ಅಭೂತಪೂರ್ವ ಪ್ರಯತ್ನದ ಗ್ರಂಥ ಮರೆಯದ ಮಾಣಿಕ್ಯವಾಗಿದೆ. ಈ ಮಾಣಿಕ್ಯಕ್ಕೆ ನನ್ನ ಪ್ರೀತಿ ಪೂರಕ ಹಾರೈಕೆ ಸಲ್ಲುತ್ತದೆ.

ಸಹಿ/–



ಶುಭ ಹಾರೈಕೆ

ಶ್ರೀ ವೆಂಕಟನಾರಾಯಣ ಶ್ರೇಷ್ಠಿ
ಧವನಂ ಜ್ಯುವೆಲರ್ಸ್
ಅವಿನ್ಯು ರಸ್ತೆ, ಬೆಂಗಳೂರು

'ನದಿ ದಾಟಿದ ಮೇಲೆ ಅಂಬಿಗನ ಹಂಗೇನು' ಎಂದು ಹೇಳುವ ಜನರೇ ಇರುವ ಈ ಕಾಲದಲ್ಲಿ ಶ್ರೀಯುತ ಚಿಕ್ಕಮರೀಗೌಡರಿಗೆ ಶ್ರೀಯುತ ಎಂ. ಲಿಂಗೇಗೌಡರು ಬಾಲ್ಯದಲ್ಲಿ ಮಾಡಿದ್ದ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡು ಅವರ 78ನೇ ವರ್ಷಗಳ ಇಳಿ ವಯಸ್ಸಿನಲ್ಲಿ ಗೌಡರ 57 ವರ್ಷಗಳ ಇತಿಹಾಸವನ್ನು ಸಂಶೋಧನೆ ಮಾಡಿ 'ಮರೆಯದ ಮಾಣಿಕ್ಯ' ಎಂಬ ಗ್ರಂಥವನ್ನು ಬರೆದಿರುವುದಕ್ಕೆ ಅಭಿನಂದನಾರ್ಹರಾಗಿರುತ್ತಾರೆ. ಶ್ರೀಯುತ ಚಿಕ್ಕಮರಿಗೌಡರು ನಮ್ಮ ಅಣ್ಣನವರಾದ ಮಾಜಿ ಪುರಸಭಾ ಅಧ್ಯಕ್ಷರಾಗಿದ್ದು ದೈವಾಧೀನರಾಗಿರುವ ಶ್ರೀ ವೆಂಕಟಚಲಪತಿ ಶ್ರೇಷ್ಠಿರವರ ಕಾಲದಿಂದಲೂ ನಮ್ಮ ಕುಟುಂಬಕ್ಕೆ ಮತ್ತು ಎಂ. ಲಿಂಗೇಗೌಡರ ಕುಟುಂಬಕ್ಕೆ ಆತ್ಮೀಯರಾಗಿರುತ್ತಾರೆ. ಶ್ರೀಯುತರು ಬೆಂಗಳೂರಿನ ಅವಿನ್ಯೂ ರಸ್ತೆಯಲ್ಲಿರುವ ನಮ್ಮ ಧವನಂ ಜ್ಯುವೆಲರ್ಸ್ ಮಳಿಗೆಗೆ ಬಂದು ಲಿಂಗೇಗೌಡರ ಬಗ್ಗೆ ನಮ್ಮಿಂದ ಮಾಹಿತಿಯನ್ನು ಸಂಗ್ರಹಿಸಿರುವುದು ಗೌಡರ ಬಗ್ಗೆ ಇವರಿಗಿದ್ದ ಶ್ರದ್ಧಾಭಕ್ತಿಯನ್ನು ಬಿಂಬಿಸುತ್ತದೆ. ನಮಗೂ ಗೌಡರ ಕುಟುಂಬಕ್ಕೂ ನಮ್ಮ ಅಣ್ಣ ಮಾಜೀ ಪುರಸಭಾ ಅಧ್ಯಕ್ಷರಾಗಿದ್ದು ದೈವಾಧೀನರಾಗಿರುವ ಶ್ರೀ ವೆಂಕಟಾಚಲಪತಿ ಶ್ರೇಷ್ಠಿಯವರು ಮತ್ತು ಗೌಡರಿಗೂ ಇದ್ದ ಒಡನಾಟ, ಆತ್ಮೀಯತೆ, ಬಾಲ್ಯದಿಂದಲೂ ಶಾಸಕರಾಗಿ ಅವಸಾನವಾಗುವವರೆಗೆ ಗೌಡ್ರು ಮಾಡಿದ ಪಟ್ಟಣ, ತಾಲ್ಲೂಕು, ಜನಸಾಮಾನ್ಯರಿಗೂ ಮಾಡಿದ ಸಹಾಯ, ಸಹಕಾರ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೊಟ್ಟಿದ್ದ ಮಾಹಿತಿಯ ಜೊತೆಗೆ ಗೌಡರಿಗೆ ಹತ್ತಿರವಾಗಿದ್ದವರು, ಅಭಿಮಾನಿಗಳು ಮತ್ತು ಬಲ್ಲ ಮೂಲಗಳಿಂದ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ಈ ಗ್ರಂಥವನ್ನು ರಚಿಸಿದ್ದಾರೆ. ಇವರ ಪ್ರಯತ್ನಕ್ಕೆ ಶುಭವಾಗಲೆಂದು ಹಾರೈಸುತ್ತೇನೆ.

ಸಹಿ/–

ಪರಿವಿಡಿ



ಲೇಖಕರ ನುಡಿ

ಶ್ರೀಯುತ ಚಿಕ್ಕಮರಿಗೌಡರು ಗ್ರಾಮ ವಿದ್ಯಾ ಪ್ರಚಾರಕ ಸಂಘದ ಅಂಗಸಂಸ್ಥೆಯಾದ ದಯಾನಂದ ವಸತಿ ವಿದ್ಯಾಲಯದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು 1999 ರಲ್ಲಿ ನಿವೃತ್ತರಾಗಿರುತ್ತಾರೆ.

ಇವರು ನಿವೃತ್ತರಾದ ನಂತರ ಪೂಜ್ಯಶ್ರೀ ಎಸ್. ಕರಿಯಪ್ಪನವರು ಇವರಿಗೆ 13 ನೇ ವಯಸ್ಸಿನಿಂದ ಮಾರ್ಗದರ್ಶಕರಾಗಿದ್ದು, ಸಂಸ್ಥೆಯಲ್ಲಿ ವಿವಿಧ ಹುದ್ದೆಗಳನ್ನು ಕೊಟ್ಟು ಪ್ರೋತ್ಸಾಹಿಸಿದ್ದರು. ಇವರು ಪೂಜ್ಯರು ಕೊಟ್ಟಿದ್ದ ಸಂಸ್ಥೆಯಲ್ಲಿನ ಹುದ್ದೆಯನ್ನು ಬಿಟ್ಟು ಇವರಿಗೆ ಶಿಕ್ಷಕರಾಗುವ ಆಸಕ್ತಿ ಇದ್ದುದರಿಂದ ಬೆಂಗಳೂರು ಮೈಸೂರು ಬಿಟ್ಟು ಬೇರೆ ಕಡೆ ಶಿಕ್ಷಕ ತರಬೇತಿ ಪಡೆಯಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾಗಿದ್ದ ಹೆಚ್.ವಿ. ಶ್ರೀರಂಗರಾಜುರವರಿಗೆ ಪತ್ರ ಬರೆದುಕೊಟ್ಟು ಸ್ಥಳಾವಕಾಶ ಮಾಡಿಕೊಡಲು ಕೋರಿದ್ದರು. ಪೂಜ್ಯರ ಅಣತಿಯಂತೆ ಅವರು ಸ್ಥಳಾವಕಾಶ ಮಾಡಿಸಿಕೊಟ್ಟಿದ್ದರು. ಮೈಸೂರಿನಲ್ಲಿ ವೃತ್ತಿ ಶಿಕ್ಷಣ ಪಡೆದ ನಂತರ ಶ್ರೀಯುತರು ಸಂಸ್ಥೆಯಲ್ಲಿ ಶಿಕ್ಷಕರ ಹುದ್ದೆ ಇಲ್ಲವಾಗಿದ್ದುದರಿಂದ ಪೂಜ್ಯರ ಗೆಳೆಯರಾಗಿದ್ದ ದಿವಂಗತ ಶಿವಾನಂದ ಶರ್ಮರವರ ರಾಷ್ಟ್ರೀಯ ವಿದ್ಯಾಲಯ ಸಂಸ್ಥೆಯಲ್ಲಿ ಶಿಕ್ಷಕರಾಗಿ ಕೆಲಸಕ್ಕೆ ಸೇರಿದ್ದರು. ಪೂಜ್ಯರ ಆದೇಶದಂತೆ 1963 ರಲ್ಲಿ ಆ ಸಂಸ್ಥೆಯನ್ನು ಬಿಟ್ಟು ದಯಾನಂದ ವಸತಿ ವಿದ್ಯಾಲಯ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರಾಗಿ ಬಂದು ಸೇರಿದ್ದರು. ಬಾಲ್ಯದಿಂದಲೂ ಪೂಜ್ಯರ ನೆರಳಲ್ಲೇ ಬೆಳೆದ ಇವರು ಅವರ ಆಚಾರ – ವಿಚಾರ ಧಾರೆಗಳನ್ನು ಗಮನಿಸಿದ್ದು ಪೂಜ್ಯರನ್ನು ಕುರಿತು 'ಬಿಂಬ' ಕೃತಿಯನ್ನು ರಚಿಸಿದ್ದರು.

'ಉಪಕಾರ ಸ್ಮರಣೆಯಲ್ಲಿ ಪ್ರೀತಿ, ದಯೆ, ಕರುಣೆಯಲ್ಲಿ ಪ್ರಾಣಿಗಳೇ ಬಲು ಮೇಲು ಬಹು ಜನರು ಬಲು ಕೀಳು' ಎಂಬ ನಾಣ್ನುಡಿಯನ್ನು ಹುಸಿಗೊಳಿಸಿ ಎಂ. ಲಿಂಗೇಗೌಡರಲ್ಲಿ ಇವರು ಕಂಡಿದ್ದ ಮಾನವೀಯತೆಯನ್ನು ಗಮನಿಸಿ ಅವರು ಮಾಡಿದ್ದ ಸರ್ವಾಂಗೀಣ ಸೇವೆಯನ್ನು ಸ್ಮರಿಸಿ ಅವರನ್ನು ಕುರಿತು 'ಮರೆಯದ ಮಾಣಿಕ್ಯ' ಎಂಬ ಕೃತಿಯನ್ನು ರಚಿಸಲು ಹೊರಟಿದ್ದು ಇವರ ಪ್ರಾಮಾಣಿಕತೆಗೆ ಹಿಡಿದ

ದರ್ಪಣವಾಗಿದೆ. ಇದಕ್ಕೆ ಕಾರಣ ರಚನೆಕಾರರಿಗೆ ಐದನೇ ತರಗತಿಯಿಂದ ಹತ್ತನೇ ತರಗತಿವರೆಗೆ ವಿದ್ಯಾರ್ಥಿ ವೇತನ ಕೊಡಿಸಿದ್ದು ಒಂದು. ಎರಡನೆಯದಾಗಿ ಮೋಜಿಣಿ ಕೆಲಸದ ಸಂದರ್ಶನಕ್ಕೆ ಕರೆಬಂದಿದ್ದ ಚಂಬಳಿಕೆದೊಡ್ಡಿಯ ಒಬ್ಬ ಅಭ್ಯರ್ಥಿಗೆ ಸಿಗರೇಟು ಕಟ್ಟಿನ ಒಳ ಬಿಳಿಯ ರಟ್ಟಿನ ಮೇಲೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗೆ ಮಾಡಿದ್ದ ಶಿಫಾರಸ್ಸು ಫಲಕಾರಿಯಾಗಿತ್ತು.

'ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ಮಳೆಯ ವಿಧಿ ತಾ ಸುರಿಯೇ. ಬೆಲ್ಲ ಸಕ್ಕರೆಯಾಗು ಧೀನದುರ್ಬಲರಿಗೆ ಎಲ್ಲರೊಳಗೊಂದಾಗು ಮಂಕು ತಿಮ್ಮ' ಎಂಬ ಡಿ.ವಿ.ಜಿ. ಯವರ ಕವಿ ವಾಣಿಗೆ ತಕ್ಕಂತೆ ಇದ್ದವರು ಎಂ. ಲಿಂಗೇಗೌಡರು ಎಂಬ ವಿಚಾರಧಾರೆಯನ್ನು ಉಲ್ಲೇಖಿಸಿ ರಚನೆಕಾರರು ಚಿಕ್ಕಂದಿನಿಂದಲೂ ಗೌಡರ ಆಚಾರ – ವಿಚಾರ ಧಾರೆಗಳನ್ನು ಗಮನಿಸಿದ್ದು ಕನಕಪುರ ಪಟ್ಟಣದ ಕನಕಪುರ ತಾಲ್ಲೂಕಿನ ರೈತ ಬಾಂಧವರಿಗೆ ಮಾಡಿದ್ದ ಸೇವೆಯನ್ನು ಸ್ಮರಿಸಿ ಪೂಜ್ಯಶ್ರೀ ಎಸ್. ಕರಿಯಪ್ಪನವರಂತೆ ಜನತೆ ಸ್ಮರಿಸಿಕೊಳ್ಳಲು ಅತೀ ಶ್ರೇಷ್ಠರು ಎಂಬುದನ್ನರಿತು ಈ ಕೃತಿಯನ್ನು ರಚಿಸಲು ಪ್ರಯತ್ನಿಸಿರುವುದು ಶ್ಲಾಘನೀಯವಾಗಿದೆ.

ಮಾಡಿದ ಸಹಾಯವನ್ನು ಮರೆಯುವ ಮನುಷ್ಯರೇ ಹೆಚ್ಚಾಗಿರುವ ಈ ಕಾಲದಲ್ಲಿ ಗೌಡರನ್ನು ಸ್ಮರಿಸಿಕೊಂಡು ಅವರ ಬಗ್ಗೆ ಕೃತಿಯನ್ನು ರಚಿಸಲು ಹೊರಟಿರುವುದು ಇವರ ಹೃದಯ ವೈಶಾಲ್ಯಕ್ಕೆ ಸಾಕ್ಷಿಯಾಗಿದೆ. 'ಮಾಡಿದ ಸಹಾಯವನ್ನು ಸ್ಮರಿಸಿಕೋ, ಹಿಮ್ಮಡಿ ಕಾಲನ್ನು ತೊಳೆದುಕೋ' ಎಂದರೆ ಸ್ಮರಿಸಿಕೊಳ್ಳದವನು ಕೃತಘ್ನ ಅದರಿಂದ ಕೆಡಕಾಗುತ್ತದೆ. ಹಿಮ್ಮಡಿ ಕಾಲು ತೊಳೆಯದಿದ್ದರೆ ರೋಗ ಬರುತ್ತದೆ ಎಂಬುದು ಅದರ ಅರ್ಥ.

ಗೌಡರು ಕನಕಪುರದಲ್ಲಿ ನೀರಿನ ಬವಣೆ ನೀಗಿಸಲು ಎತ್ತರದ ನೀರಿನ ಎರಡು ಕಟ್ಟೆಗಳು, ಉದ್ದನೆಯ ಕಾಂಕ್ರೀಟ್ ರಸ್ತೆ ರಚನೆಕಾರರ ಸ್ಮೃತಿಪಟದಲ್ಲಿ 50 ವರ್ಷಗಳಿಂದ ಉಳಿದುದೇ ಕಾರಣವಿರಬಹುದು. ಇಲ್ಲದಿದ್ದರೆ 28 ವರ್ಷ ವಯಸ್ಸು ತುಂಬಿ 80ರ ದಶಕಕ್ಕೆ ಪಾದರ್ಪಣೆ ಮಾಡಿರುವ ಇವರು 1900–1963 ರ ವರೆಗೆ ಗೌಡರ ಜೀವಿತದಲ್ಲಿ ನಡೆದ ಎಲ್ಲಾ ಸತ್ಕಾರ್ಯಗಳನ್ನು ಸ್ಮರಿಸಿ ಬರೆದಿರುವ ಕೃತಿ ಇದಾಗಿದೆ.

ಇವರ ಪ್ರಯತ್ನಕ್ಕೆ ದೈವಾನುಗ್ರಹ ಇರಲೆಂದು ಹಾರೈಸುತ್ತಾ ವಿರಮಿಸುತ್ತಿದ್ದೇನೆ.

ಇಂತಿ,

ಶ್ರೀ ಚಿಕ್ಕಮರಿಗೌಡರು
ಲೇಖಕರು ಹಾಗೂ ನಿವೃತ್ತ ಶಿಕ್ಷಕರು
ಆರ್.ಇ.ಎಸ್. ಕನಕಪುರ.



ಮುನ್ನುಡಿ

“ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ, ಬೆಲ್ಲ ಸಕ್ಕರೆಯಾಗು ದೀನ–ದುರ್ಬಲರಿಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ” ಇದು ಡಿ.ವಿ.ಜಿ. ಯವರ ವಾಣಿ ಇದರ ಜೊತೆಗೆ ಏನಾದರು ಆಗು ಮೊದಲು ಮಾನವನಾಗು, ಮಾನವ ಜನ್ಮ ಬಲು ದೊಡ್ಡದು, ಈ ಸರ್ವ ವಾಣಿಗಳ ಸಮ್ಮಿಲನವೇ ಶ್ರೀಯುತ ಎಂ. ಲಿಂಗೇಗೌಡರು. ಪ್ರಧಾನಿ ಲಾಲ್ ಬಹದ್ದೂರ್‌ಶಾಸ್ತ್ರಿ, ವಾಜಪೇಯಿ, ವಿದ್ಯಾಮಂತ್ರಿ ಗೋವಿಂದೇಗೌಡರು, ವಿದ್ಯಾಮಂತ್ರಿ ಕೆ.ವಿ. ಶಂಕರೇಗೌಡರು, ಎಸ್. ಕರಿಯಪ್ಪನವರು ಇಂತಹ ಸೇವಾಮನೋಭಾವವುಳ್ಳ ರಾಜಕಾರಣಿಗಳು ದುರ್ಲಭ, ಇವರ ಶ್ರೇಣಿಗೆ ಸೇರಿದವರು ಮಾನ್ಯ ಶ್ರೀ ಎಂ. ಲಿಂಗೇಗೌಡರು.

ಪೂಜ್ಯ ಶ್ರೀ ಎಸ್. ಕರಿಯಪ್ಪನವರ ಪಾದದ ನೆರಳಿನಲ್ಲಿ ಬೆಳೆದ ನಾನು 1967ರಿಂದ ಅವರ ಆಚಾರ ವಿಚಾರ, ನಡೆ, ನುಡಿ, ಆದರ್ಶ, ಸೇವಾ ಮನೋಭಾವಗಳನ್ನು ಅರಿತಿದ್ದ ನಾನು 2014ರಲ್ಲಿ ‘ಬಿಂಬ’ ಎಂಬ ಕೃತಿಯನ್ನು ರಚಿಸುವಾಗ ಅವರಂತೆಯೇ ಸೇವಾ ಮನೋಭಾವವುಳ್ಳ ಶ್ರೀ. ಎಂ. ಲಿಂಗೇಗೌಡರನ್ನು ಕುರಿತು ಕೃತಿ ರಚಿಸಬಾರದೇಕೆ ಎಂದು ಯೋಚಿಸತೊಡಗಿದೆ. ಯಾವ ಹೆಸರಿನಲ್ಲಿ ರಚಿಸಬೇಕೆಂಬ ಗೊಂದಲ ಉಂಟಾಗಿ ತೊಳಲುತ್ತಿದ್ದಾಗ ನನ್ನ ಸ್ಮೃತಿ ಪಟಲದಲ್ಲಿ ತೇಲಿಹೋದ ವಿಷಯಗಳಲ್ಲಿ ‘ಮರೆಯದ ಮಾಣಿಕ್ಯ’ ಎಂಬ ಶೀರ್ಷಿಕೆ ಸಿದ್ದವಾಯ್ತು. ಅದರಂತೆ ಈ ಕೃತಿಯನ್ನು ರಚಿಸಿದ್ದೇನೆ.

ಅವರ ಅಮೂಲ್ಯ ಸೇವಾಮನೋಭಾವಕ್ಕೆ ಉದಾಹರಣೆ ನಾನು ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹಾಡುಗಾರನಾಗಿದ್ದೆ. ಶ್ರೀಯುತ ಎಂ ಲಿಂಗೇಗೌಡರು ಕನಕಪುರದಲ್ಲಿ ರಾಜಕೀಯ ಹುದ್ದೆಗಳ ಸಮಾರಂಭದಲ್ಲಿ ಭಾಗವಹಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಪ್ರಾರ್ಥನಾಗೀತೆ ಹಾಡುತ್ತಿದ್ದು, ಅವರಿಗೆ ಚಿರಪರಿಚಿತನಾಗಿದ್ದೆ.

ನಾನು ವ್ಯಾಸಂಗ ಮಾಡುತ್ತಿದ್ದ ವೇಳೆಯಲ್ಲಿ ಅವರು ವಿದ್ಯಾರ್ಥಿವೇತನ ಸಮಿತಿಗೆ ಅಧ್ಯಕ್ಷರಾಗಿದ್ದರು.

ನನ್ನ ಹಿತೈಷಿಗಳು ಹಾಗೂ ಗುರುಗಳಾಗಿದ್ದ ಸುಬ್ಬಕೃಷ್ಣ ಪಂಡಿತ್‌ರವರು ನನ್ನ ಆರ್ಥಿಕ ಸ್ಥಿತಿಯನ್ನು ಅರಿತಿದ್ದರು.

ಶ್ರೀಯುತ ಗೌಡರು ವಿದ್ಯಾರ್ಥಿವೇತನ ಸಮಿತಿಗೆ ಅಧ್ಯಕ್ಷರಾಗಿದ್ದುದು ಅವರ ಗಮನಕ್ಕೆ ಬಂದಿತ್ತು. ಈ ಬಗ್ಗೆ ಗೌಡರನ್ನು ಕಾಣಲು ನನಗೆ ಸೂಚನೆ ಕೊಟ್ಟರು.

ಒಂದು ದಿನ ಪೂಜ್ಯ ಶ್ರೀ ಎಸ್. ಕರಿಯಪ್ಪನವರ ಕೊಠಡಿಯಲ್ಲಿ ಶ್ರೀಯುತ ಗೌಡರು ಕನಕಪುರದ ಆಗು – ಹೋಗುಗಳ ಹಾಗೂ ಅಭಿವೃದ್ಧಿಯ ಬಗ್ಗೆ ಗಹನವಾಗಿ ಚರ್ಚಿಸುತ್ತಿದ್ದರು.

ಅಲ್ಲಿಗೆ ಹೋಗಿ ನಿಂತುಕೊಂಡಿದ್ದೆ, ಲಿಂಗೇಗೌಡರು ಭಾಗವಹಿಸುವ ಸಮಾರಂಭಗಳಲ್ಲಿ ಕರಿಯಪ್ಪನವರು ಇರುತ್ತಿದ್ದು ನನ್ನ ಪರಿಚಯ ಅವರಿಗಿತ್ತು.

ನನ್ನನ್ನು ನೋಡಿ 'ಏನಪ್ಪ ಬಂದೆ' ಎಂದರು ವಿಷಯ ತಿಳಿಸಿದೆ, ಗೌಡರು ನಾನು ಓದುತ್ತಿದ್ದ ತರಗತಿ ಶಾಲೆ ನನ್ನ ಹೆಸರನ್ನು ಬರೆದುಕೊಂಡು, ವಿದ್ಯಾರ್ಥಿ ವೇತನ 'ಕೊಡಿಸೋಣ ಹೋಗಪ್ಪ' ಎಂದರು.

ಅವರು ವಾಗ್ದಾನ ಕೊಟ್ಟಂತೆ ಐದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಮಂಜೂರು ಮಾಡಿದ ವಿದ್ಯಾರ್ಥಿ ವೇತನದಿಂದ ನನ್ನ ವಿದ್ಯಾಭ್ಯಾಸ ಪೂರ್ಣಗೊಂಡಿತು, ಪ್ರತಿ ವರ್ಷ ಬರುತ್ತಿದ್ದ ಮೂರು ರೂಪಾಯಿ ವಿದ್ಯಾರ್ಥಿವೇತನ ಈಗಿನ ಮುನ್ನೂರು ರೂಪಾಯಿಗಳಿಗೆ ಸಮವಾಗಿರುತ್ತದೆ.

ಉಪಕಾರ ಸ್ಮರಣೆಯಲ್ಲಿ ಪ್ರೀತಿ, ದಯೆ, ಕರುಣೆಯಲ್ಲಿ ಪ್ರಾಣಿಗಳೇ ಬಲು ಮೇಲು. ಪ್ರಾಣಿಗಳಿಗೆ ಬದಲಾಗಿ ನಾನು ಏಕಾಗಬಾರದು, ಮಾಡಿದ ಉಪಕಾರವನ್ನು ಸ್ಮರಿಸಿಕೊಳ್ಳುವವನು ಕೃತಜ್ಞನಾಗುತ್ತಾನೆ.

'ಕಷ್ಟದಲ್ಲಿ ಆದವರನ್ನು ನೆನೆಸಿಕೊಳ್ಳೋ ಆದೀ ನಾರಾಯಣ' ಎಂದು ನನ್ನ ತಾಯಿ ಶಿವೈಕ್ಯ ಮಂಚಮ್ಮನವರು ಹೇಳುತ್ತಿದ್ದ ನೀತಿನುಡಿ ನನ್ನನ್ನು ಎಚ್ಚರಿಸಿ ಈ ಕೃತಿ ರಚಿಸಲು ಪ್ರೇರೇಪಿಸಿತು. ಈ ಕೃತಿ ರಚಿಸಲು ಯಾರ ಒತ್ತಡವಾಗಲಿ, ಒತ್ತಯವಾಗಲಿ ಇರಲಿಲ್ಲ.

ನನ್ನ ಈ ಅನಿಸಿಕೆಯನ್ನು ಆತ್ಮೀಯರಲ್ಲಿ ಭಿನ್ನವಿಸಿಕೊಂಡಾಗ ಅರವತ್ತಾರು ವರ್ಷಗಳಲ್ಲಿ ನಡೆದ ಘಟನೆಗಳು ನಿನಗೆ ನೆನಪಿದೆಯೇ ಎಂದು ನನ್ನನ್ನು ಪ್ರಶ್ನಿಸಿ ನೆನಪಿದ್ದರೆ ಬರೆಯಲು ಸೂಕ್ತಸಮಯವಾಗಿದೆ ಎಂದು ಹುರಿದುಂಬಿಸಿದರು.

ವಿದ್ಯಾರ್ಥಿ ವೇತನವನ್ನು ಕೇಳಲು ಹೋಗಿದ್ದಾಗ ಶ್ರೀಯುತ ಗೌಡರು ಕರಿಯಪ್ಪನವರಿಗೆ ನಾನು ಪರಿಚಿತನಿದ್ದರು ಮತ್ತೊಮ್ಮೆ ನನ್ನನ್ನು ಪರಿಚಯಿಸಿ ಮುಂದೆ ಪ್ರೋತ್ಸಾಹ ನೀಡಲು ಹೇಳಿದರು, ನಾನು ಎಂಟನೇ ತರಗತಿ ಓದಲು ಗ್ರಾಮದ ವಿದ್ಯಾಪ್ರೌಢಶಾಲೆಗೆ ಸೇರಿದಂದಿನಿಂದ ಕರಿಯಪ್ಪನವರು ಅಂತ್ಯವಾಗುವವರೆಗೆ ಸರ್ವವಿಧದಲ್ಲೂ ನನ್ನನ್ನು ಪ್ರೋತ್ಸಾಹಿಸಿದರು.

ಈ ಕೃತಿ ರಚಿಸಲು ಬರವಣಿಗೆಗೆ ಸಹಕಾರ ನೀಡಿದ ರೂರಲ್ ಕಾಲೇಜಿನ ವಿದ್ಯಾರ್ಥಿಯಾದ ಪಿ. ಮನೋಹರ ಮತ್ತು ಕನಕಪುರದ ಕಾಮಧೇನು ಮಳಿಗೆಯಲ್ಲಿ ಬೆರಳಚ್ಚು ಕೂಟದ ಮಾಲೀಕರಾದ ಸಂತೇ ಕೋಡಿಹಳ್ಳಿ ಶ್ರೀ ರಂಗಸ್ವಾಮಿರವರ ಪುತ್ರ ಶ್ರೀ ಕೆ.ವಿ. ರವಿಕುಮಾರ್ ರವರು ತಮ್ಮ ಸಹಾಯಕರೊಡನೆ 'ಮರೆಯದ ಮಾಣಿಕ್ಯ' ಕೃತಿಯ ಬೆರಳಚ್ಚು ಪ್ರತಿಯನ್ನು ಉತ್ತಮವಾಗಿ ಮಾಡಿಕೊಟ್ಟು ಸಹಕರಿಸಿದ್ದಾರೆ. ಇವರೆಲ್ಲರಿಗೆ ಧನ್ಯವಾದ ಹಾಗೂ ಆಶೀರ್ವಾದಗಳು ಸಲ್ಲುತ್ತದೆ.

ಸನ್ಮಾನ್ಯ ಎಂ. ಲಿಂಗೇಗೌಡರನ್ನು ಕುರಿತಾದ ಅವರ ಜೀವನ ಪರಿಚಯ ಮತ್ತು ಮರೆಯದ ಮಾಣಿಕ್ಯ ಅಭಿನಂದನಾ ಗ್ರಂಥಕ್ಕೆ ವಿಷಯ ಸಂಗ್ರಹಿಸಲು ಸಹಕರಿಸಿದ ಅವರ ಅಭಿಮಾನಿ ಬಳಗದ ಸ್ವಾತಂತ್ರ್ಯ ಹೋರಾಟಗಾರರಾದ ಕನ್ನಡಕದ ರಾಮಣ್ಣನವರು. ಗೌಡರ ಸೋದರ ಅಳಿಯ ನಿವೃತ್ತ ಶಿಕ್ಷಕ ಚಾಕನಹಳ್ಳಿಯ ಪುಟ್ಟಸ್ವಾಮಿಗೌಡರು, ಬೆಂಗಳೂರಿನ ಧವನಂ ಜ್ಯುವೆಲರ್ಸ್ ವೆಂಕಟನಾರಾಯಣ ಶೆಟ್ಟರು, ಗ್ರಾಮ ವಿದ್ಯಾ ಪ್ರಚಾರಕ ಸಂಘದ ಮಾಜಿ ಸದಸ್ಯರು ಆಗಿದ್ದ ಮಳಗಾಳು ನಾಗೇಗೌಡರು. ಮಳಗಾಳು ಪುಟ್ಟೇಗೌಡರ ಮಗ ನಾಗೇಗೌಡರು 1953–1954 ರವರೆಗೆ ಗೌಡರು ವಿದ್ಯಾರ್ಥಿ ವೇತನದ ಅಧ್ಯಕ್ಷರಾಗಿದ್ದಾಗ ಅವರಿಂದ ಸಹಾಯ ಪಡೆದ ಚಿಕ್ಕಮರೀಗೌಡರು ಕನಕಪುರ ಕಸಬಾ ಬಕರೇಗೌಡರ ಮಗ ಹಾಲಿ ಕನಕಪುರದಲ್ಲಿ ವಾಸವಾಗಿರುವ ಹೊನ್ನೇಗೌಡರು ಮೇಗಳ ಬೀದಿಯ ಬಂಡೀದಾಸ ಶೆಟ್ಟರ ಕುಟುಂಬಸ್ಥರಾದ ಚೆನ್ನಮಲ್ಲಶೆಟ್ಟರು ಗ್ರಾಮಾಂತರ ಪ್ರಚಾರಕ ಸಂಘದ ಮಾಜಿ ಕಾರ್ಯದರ್ಶಿಯವರಾಗಿದ್ದ ಗಡಸಹಳ್ಳಿ ಜಿ.ಎಸ್. ರಾಮಸ್ವಾಮಿಯವರ ಮಗ ಭಾಸ್ಕರ್‌ರವರು, ಕೋಟೆ ನಾಗಪ್ಪನವರ ಮಗ ವೆಂಕಟೇಶಮೂರ್ತಿಯವರು, ಮಳಗಾಳಿನ ಕೋರ್ಟ್ ತಿಮ್ಮಶೆಟ್ಟರು, ಬಾಳೇಕಾಯಿ ಮಂಡಿಯ ಎಂ.ಆರ್. ನಾರಾಯಣಶೆಟ್ಟರೆಲ್ಲರಿಗೂ ಲೇಖಕರ ಆತ್ಮೀಯ ಕೃತಜ್ಞತೆಗಳು ಸಲ್ಲುತ್ತದೆ.

ಇಂತಿ,

ಎಂ.ಎಲ್. ಶಿವಕುಮಾರ್, ಎಂ.ಎ.,
ಉಪಾಧ್ಯಕ್ಷರು
ಗ್ರಾಮ ವಿದ್ಯಾ ಪ್ರಚಾರಕ ಸಂಘ
ಕನಕಪುರ – 562117
ರಾಮನಗರ ಜಿಲ್ಲೆ.



ಅಭಿನಂದನಾ ನುಡಿ

ಶ್ರೀಯುತ ಚಿಕ್ಕಮರಿಗೌಡರು ಗ್ರಾಮ ವಿದ್ಯಾ ಪ್ರಚಾರಕ ಸಂಘದ ಅಂಗಸಂಸ್ಥೆಯಾದ ದಯಾನಂದ ವಸತಿ ವಿದ್ಯಾಲಯದಲ್ಲಿ ಉಪಾಧ್ಯಾಯರಾಗಿದ್ದು ಪೂಜ್ಯ ಶ್ರೀ ಎಸ್. ಕರಿಯಪ್ಪನವರ ಆಶೀರ್ವಾದದಿಂದ ಬೆಳೆದು ಬಂದವರು. ನಾನು ಸಹಾ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಅವರ ಮನೆಗೆ ಹೋಗಿ ಪಾಠ ಕಲಿಯುತ್ತಿದ್ದೆ. ನನಗೂ ಗೌಡರಿಗೂ ಒಡನಾಟ ಮತ್ತು ಬಾಂಧವ್ಯವಿದ್ದು ಅವರ ಪಕ್ಕದ ಊರಿನ ತಗಡೇಗೌಡನ ದೊಡ್ಡಿಯಲ್ಲಿ ನನಗೆ ಸಂಬಂಧ ಬೆಳೆದಿದ್ದು ಅವರ ಸಂಪರ್ಕ ನನಗೆ ಇನ್ನೂ ಹತ್ತಿರವಾಯಿತು.

ನಾನು ಗ್ರಾಮ ವಿದ್ಯಾ ಪ್ರಚಾರಕ ಸಂಘದ ಆಜೀವ ಸದಸ್ಯನಾಗಿದ್ದು ಸಂಘಕ್ಕೆ ಪ್ರವೇಶಿದ ಮೇಲೆ ಕಾರ್ಯದರ್ಶಿ, ಕೋಶಾಧ್ಯಕ್ಷ ಹುದ್ದೆಗಳನ್ನು ಅಲಂಕರಿಸಿದ್ದು ಈಗ ಹಾಲಿ ಉಪಾಧ್ಯಕ್ಷನಾಗಿ ಸೇವೆಸಲ್ಲಿಸುತ್ತಿದ್ದೇನೆ. ಶ್ರೀಯುತ ಗೌಡರು ಪ್ರತಿ ವರ್ಷ ಶ್ರೀರಾಮನವಮಿಯ ದಿನ ಪೂಜ್ಯ ಶ್ರೀ ಎಸ್. ಕರಿಯಪ್ಪನವರ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದು ಪೂಜ್ಯರ ಬಗ್ಗೆ ಬರೆದ ಕವನಕ್ಕೆ ರಾಗ ಸಂಯೋಜನೆ ಮಾಡಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅಲ್ಲದೆ ಕೆಲವು ಮಕ್ಕಳ ತಂಡದಿಂದ ಆ ಸಂದರ್ಭದಲ್ಲಿ ಭಜನೆ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರು. 1957–1988ರ ವರೆಗೆ ಬೆಂಗಳೂರು ಆಕಾಶವಾಣಿಯಲ್ಲಿ ಹಾಡುತ್ತಿದ್ದುದ್ದನ್ನು ನಾವು ಬಾಲ್ಯದಿಂದಲೂ ಕೇಳುತ್ತಿದ್ದೆವು. ಅನಂತರ ಇವರು ಬೆಂಗಳೂರು ದೂರದರ್ಶನ ಚಂದನ ವಾಹಿನಿಯಲ್ಲಿ ಹಾಡಲು ಪ್ರಾರಂಭಿಸಿದ್ದು ಗಾಯನ ಕಲೆ ಇವರಿಗೆ ಕರಗತವಾಗಿತ್ತು. ಕವನಗಳನ್ನು ರಚಿಸುವುದು ಇವರ ಹವ್ಯಾಸವಾಗಿತ್ತು. ಪೂಜ್ಯ ಶ್ರೀ ಎಸ್. ಕರಿಯಪ್ಪನವರ ಬಗ್ಗೆ ಕವನಗಳನ್ನು ರಚಿಸಿ ಹಾಡುತ್ತಿದ್ದುದ್ದನ್ನು ಗಮನಿಸಿದ್ದ ನಾನು 'ಇವುಗಳನೆಲ್ಲ ಏನು ಮಾಡುತ್ತೀರಿ' ಎಂದು ಕೇಳಿದಾಗ ಇಷ್ಟೆ ಅಲ್ಲ ಪೂಜ್ಯ ಕರಿಯಪ್ಪನವರ ಸಂಪರ್ಕದಲ್ಲಿದ್ದ ನಾನು ಅವರ ಆಚಾರ – ವಿಚಾರ – ಧಾರೆಗಳನ್ನು ಲೇಖನ ರೂಪದಲ್ಲಿ ಬರೆದು ಇಡುತ್ತಿದ್ದೇನೆ ಎಂದು ಹೇಳಿದಾಗ, ಅವುಗಳೆಲ್ಲವನ್ನು ಕೊಡಿ, 'ಭವಾನಿ ಟ್ರಸ್ಟ್' ಅಧ್ಯಕ್ಷರೂ ಹಾಗೂ ಸಂಸ್ಥೆಯ ಉಪಾಧ್ಯಕ್ಷರು ಆಗಿರುವ ಸನ್ಮಾನ್ಯ ಶ್ರೀ ಲಕ್ಷ್ಮಣ್‌ರವರಿಂದ ಅವರ ಸ್ವಂತ ಖರ್ಚಿನಲ್ಲಿ

ಮುದ್ರಿಸಿ ಸಂಸ್ಥೆಯ ಎಲ್ಲಾ ಭೋಧಕ ವೃಂದಕ್ಕೆ ಕೊಟ್ಟು ಅವರೆಲ್ಲರು ಕರಿಯಪ್ಪನವರ ವಿಚಾರ ಧಾರೆಗಳನ್ನು ಓದುವಂತೆ ಮಾಡೋಣವೆಂದು ಹೇಳಿದೆ. ನನ್ನ ಸಲಹೆಯಂತೆ ಗೌಡ್ರು ಕರಿಯಪ್ಪನವರನ್ನು ಕುರಿತಾದ 45 ಕವನಗಳು ಮತ್ತು 63 ಘಟನಾವಳಿಗಳನ್ನು 'ಬಿಂಬ' ಕೃತಿ ರೂಪದಲ್ಲಿ ರಚಿಸಿಕೊಟ್ಟರು, ಕೃತಿಯು 2014ರಲ್ಲಿ ಪದವಿ ಕಾಲೇಜಿನ ಶ್ರೀ ರಾಮಾಯಣ ದರ್ಶನಂ ಮತ್ತು ಭಾವಗೀತೆಗಳ ಸ್ಪರ್ಧೆ ಏರ್ಪಡಿಸಿದ್ದ ದಿನದಂದು ಸನ್ಮಾನ್ಯ ಶ್ರೀ ಚೌಟರವರು ಮತ್ತು ಪ್ರೊ|| ಸಿ.ಪಿ. ಕೃಷ್ಣಕುಮಾರ್‌ರವರ ಸ್ವಾಹಸ್ತದಿಂದ ಬಿಡುಗಡೆಯಾಯಿತು.

ಇದೇ ಸಂದರ್ಭದಲ್ಲಿ ಗೌಡರು ಪೂಜ್ಯ ಶ್ರೀ ಎಸ್. ಕರಿಯಪ್ಪನವರಂತೆ ತನ್ನ ಬದುಕಿಗೆ ಪ್ರೋತ್ಸಾಹ ನೀಡಿದ ಮತ್ತೋರ್ವ ಮಹಾನ್ ವ್ಯಕ್ತಿ ಇದ್ದಾರೆ. ಅವರು 'ನಿಮ್ಮ ತಂದೆ ಸನ್ಮಾನ್ಯ ಶ್ರೀ ಎಂ. ಲಿಂಗೇಗೌಡರು ಅವರ ಬಗ್ಗೆ ಕೃತಿ ರಚಿಸಬೇಕೆಂದಿದ್ದೇನೆ ಇದಕ್ಕೆ ತಮ್ಮ ಒಪ್ಪಿಗೆ ಇದೆಯೇ' ಎಂದು ಕೇಳಿದಾಗ ನನಗೆ ಮುಜುಗರವೆನಿಸಿತು. ಆದರೂ ಅವರ ಆಶೋತ್ತರಗಳಿಗೆ ಮನ್ನಣೆ ನೀಡುವ ಉದ್ದೇಶದಿಂದ ನನಗೆ ಮನಸ್ಸಿಲ್ಲದಿದ್ದರೂ ಒಪ್ಪಿಗೆ ನೀಡಿದೆ. 1900–1963 ರವರೆಗೆ ಶ್ರೀಯುತರು ನಮ್ಮ ತಂದೆಯವರ ಬಗ್ಗೆ ಅವರ ಆಚಾರ – ವಿಚಾರಗಳನ್ನು ಬಲ್ಲ ಮೂಲಗಳಿಂದ ಸಂಗ್ರಹಿಸಿ ಅದಕ್ಕೆ 'ಮರೆಯದ ಮಾಣಿಕ್ಯ' ಎಂಬ ಶಿರೋನಾಮೆಯೊಡನೆ ಈ ಕೃತಿಯನ್ನು ರಚಿಸಿದ್ದಾರೆ.

ನನ್ನ ಬಳಿ ಹೇಳಿದಂತೆ, 'ಹೇಳದೆ ಮಾಡುವವ ರೂಢಿಯೊಳಗುತ್ತಮನು' ಎಂಬ ನಾಣ್ಣುಡಿಯನ್ನು ಅನುಕರಣೆಗೆ ತಂದು ನುಡಿದಂತೆ ನಡೆದಿದ್ದಾರೆ, ಶ್ರೀಯುತರಿಗೆ ಈಗ 78 ವರ್ಷಗಳು ನಡೆಯುತ್ತಿದ್ದು 80 ರ ದಶಕದ ಸಮೀಪವಿದ್ದರು ತಮ್ಮ ಸ್ಮೃತಿಪಟಲದಲ್ಲಿ ಶ್ರೀಯುತ ಎಂ. ಲಿಂಗೇಗೌಡರು ಅವರಿಗೆ ಮಾಡಿದ ಸಹಾಯವನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನು ನೆನಪಿನಲ್ಲಿಟ್ಟುಕೊಂಡು ಕೃತಿ ರಚಿಸಿರುವುದು ಶ್ಲಾಘನೀಯವಾಗಿದೆ.

ಶ್ರೀಯುತರಿಗೆ ಭಗವಂತನು ಆರೋಗ್ಯ ಕೊಟ್ಟು ಸಮಾಜಕ್ಕೆ ವಿವಿಧ ಸೇವೆ ಸಲ್ಲಿಸುವಂತೆ ಆಶೀರ್ವದಿಸಲಿ ಎಂದು ಹಾರೈಸುವ,

ಇಂತಿ,

ಶ್ರೀ ಲಕ್ಷ್ಮಣ್, ಬಿ.ಇ., ಎಂ.ಐ.ಇ.,
ಅಧ್ಯಕ್ಷರು
ಶ್ರೀ ಭವಾನಿ ಟ್ರಸ್ಟ್, ಬೆಂಗಳೂರು
ಮಾಜಿ ಅಧ್ಯಕ್ಷರು
ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ
ನಿರ್ದೇಶಕರು
ಆರ್.ಇ.ಎಸ್. ಕನಕಪುರ

ದಿ॥ ಶ್ರೀ ಎಂ. ಲಿಂಗೇಗೌಡರ ಜೀವನ ಪರಿಚಯ

1. ಕೌಟುಂಬಿಕ ಪರಿಚಯ

ಎಂ. ಲಿಂಗೇಗೌಡರ ತಂದೆ ಶ್ರೀ ಚಿಕ್ಕನಾಗೇಗೌಡರ, ತಾಯಿ ಶ್ರೀಮತಿ ಕೆಂಪಮ್ಮನವರು. ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು, ಆರು ಮಂದಿ ಹೆಣ್ಣುಮಕ್ಕಳು, ಒಟ್ಟು ಒಂಭತ್ತು ಮಂದಿ ಸಕುಟುಂಬ ಪರಿವಾರವಾಗಿತ್ತು. ಒಂಭತ್ತು ಮಂದಿ ಮಕ್ಕಳಲ್ಲಿ ಶ್ರೀಯುತ ಎಂ. ಲಿಂಗೇಗೌಡರು ಹಿರಿಯ ಮಗ, ಎರಡನೆಯ ಮಗ ಶ್ರೀ ಮಂಚೇಗೌಡರು, ಮೂರನೆಯ ಮಗ, ಶ್ರೀ ಎಂ.ಸಿ. ನಾಗೇಶ್‌ರವರು. ಹೆಣ್ಣು ಮಕ್ಕಳಲ್ಲಿ – ಶ್ರೀಮತಿ ದೊಡ್ಡಮ್ಮ, ಶ್ರೀಮತಿ ಕೆಂಪಮ್ಮ, ಶ್ರೀಮತಿ ಚೆನ್ನಮ್ಮ, ಶ್ರೀಮತಿ ದೇವಮ್ಮ, ಶ್ರೀಮತಿ ನಾಗಮಮ್ಮ, ಶ್ರೀಮತಿ ನಿಂಗಮ್ಮ ಈ ಆರು ಹೆಣ್ಣು ಮಕ್ಕಳು ಶ್ರೀ ಚಿಕ್ಕನಾಗೇಗೌಡರು ಮತ್ತು ಶ್ರೀಮತಿ ಕೆಂಪಮ್ಮನವರ ಸುಪುತ್ರಿಯರಾಗಿದ್ದರು.

2. ಶ್ರೀ ಎಂ. ಲಿಂಗೌಡರ ಜನನ

ಶ್ರೀಯುತ ಗೌಡರು 1900 ರಲ್ಲಿ ಮಳಗಾಳು, ಕನಕಪುರ ಟೌನ್, ಬೆಂಗಳೂರು ಜಿಲ್ಲೆಯಲ್ಲಿ ಶ್ರೀ ಚಿಕ್ಕನಾಗೇಗೌಡರು ಮತ್ತು ಶ್ರೀಮತಿ ಕೆಂಪಮ್ಮನವರ ಹಿರಿಯ ಪುತ್ರರಾಗಿ ಜನಿಸಿದರು. ಇವರ ತಂದೆ – ತಾಯಿಗಳು ಅವಿದ್ಯಾವಂತರಾಗಿದ್ದುದರಿಂದ ಗೌಡರ ಜನ್ಮ ದಿನಾಂಕವನ್ನು ಶಾಲೆಗೆ ಸೇರಿಸುವಾಗ ಎಲ್ಲೂ ನಮೂದಿಸಿರಲಿಲ್ಲ.

3. ಗೌಡರ ಬಾಲ್ಯ

ಮೇಲ್ಕಂಡ ಕುಟುಂಬದ ತುಂಬು ಸಂಸಾರದಲ್ಲಿ ಎಲ್ಲರಿಗೂ ಪ್ರೀತಿ ಪಾತ್ರರಾಗಿದ್ದ ಇವರು, ತಮ್ಮ ತಂದೆ–ತಾಯಿಗಳ ಮಮತೆಯಲ್ಲಿ ಬೆಳೆದರು, ತಾಯಿಯೇ ದೇವರು ಎಂದು ತಿಳಿದಿದ್ದ ಗೌಡರು ಅವರ ಮಾತನ್ನು ಎಂದೂ ಮೀರಿದವರಲ್ಲ, ಬಾಲ್ಯದಲ್ಲಿ ಇವರು ಊರಿನ ಮಕ್ಕಳೆಲ್ಲರ ಜೊತೆ ಅನ್ಯೋನ್ಯವಾಗಿ ಬೆರೆತು ಗೋಲಿ, ಗೆಜ್ಜುಗ, ಚೆಂಡಾಟ ಮುಂತಾದವುಗಳನ್ನು ಆಡುತ್ತಿದ್ದರು. 'ಬೆಳೆಯುವ ಪೈರನ್ನು ಮೊಳಕೆಯಲ್ಲಿ ನೋಡು' ಎಂಬ ನಾಣ್ನುಡಿಯಂತೆ ಗೌಡರು, ಬಾಲ್ಯದಲ್ಲಿಯೇ ತಂದೆ – ತಾಯಿಗಳ ಜೊತೆ ಬೆರೆತು ಅವರು ತೋಟ ಮತ್ತು ಹೊಲ ಗದ್ದೆಗಳಲ್ಲಿ ಮಾಡುವ ಕೆಲಸ ಕಾರ್ಯಗಳನ್ನು ನೋಡಿ ಅವುಗಳನ್ನು ಮೈಗೂಡಿಸಿಕೊಳ್ಳುತ್ತಿದ್ದರು. ಜೊತೆಗೆ ಊರಿನ ಹಿರಿಯರ ಆಚಾರ – ವಿಚಾರಗಳನ್ನು ಗಮನಿಸುತ್ತಿದ್ದರು. ಇವೆಲ್ಲವು ಗೌಡರ ಮುಂದಿನ ಬೆಳವಣಿಗೆಗೆ ದಾರಿದೀಪವಾದವು.

4. ಗೌಡರ ವಿದ್ಯಾಭ್ಯಾಸ

ಗೌಡರಿಗೆ ಆರು ವರ್ಷಗಳು ತುಂಬಿದ ನಂತರ ಅವರ ತಂದೆ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸಕ್ಕೆ ಕನಕಪುರ ಕೋಟೆ ಪ್ರಾಥಮಿಕ ಶಾಲೆಗೆ ಸೇರಿಸಿದರು. ಗೌಡರು ಆ ಶಾಲೆಯಲ್ಲಿ ಒಂದನೇ ತರಗತಿಯಿಂದ – ನಾಲ್ಕನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದರು. ಶಾಲೆಯಲ್ಲಿ ಓದುತ್ತಿರುವಾಗ ಗೌಡರು ಎಲ್ಲಾ ಮಕ್ಕಳಿಗಿಂತಲೂ ಮುಂಚೂಣಿಯಲ್ಲಿರುತ್ತಿದ್ದರು. ಗೌಡರ ಶ್ರದ್ಧೆ, ವಿನಯ, ನಮ್ರತೆ, ಗುರುಗಳಲ್ಲಿ ಇವರಿಗಿದ್ದ ಭಕ್ತಿ ಇವರ ಮುಂದಿನ ಶ್ರೇಯಸ್ಸಿಗೆ ನಾಂದಿಯಾಯಿತು.

ಮುಂದೆ, ಮಾಧ್ಯಮಿಕ ಶಾಲಾ ವ್ಯಾಸಂಗಕ್ಕಾಗಿ ಕನಕಪುರ ಸರ್ಕಾರಿ ಬಾಲಕರ ಮಾಧ್ಯಮಿಕ ಶಾಲೆಗೆ ಸೇರಿ 1913 ರಿಂದ 1917 ರವರೆಗೆ ನಾಲ್ಕು ವರ್ಷಗಳು ವ್ಯಾಸಂಗ ಮಾಡಿದರು (ಅಂದರೆ 5ನೇ ತರಗತಿಯಿಂದ 8ನೇ ತರಗತಿಯವರೆಗೆ) ಪ್ರಾಥಮಿಕ ಶಾಲೆಯಿಂದ ಮಾಧ್ಯಮಿಕ ಶಾಲೆಯವರೆಗೆ ವ್ಯಾಸಂಗ ಮಾಡುತ್ತಿದ್ದಾಗ ಕೆ. ಸುಬ್ಬರಾವ್ ಮತ್ತು ವೆಂಕಟರಮಣಯ್ಯನವರು ಇವರ ಜೊತೆಯಲ್ಲೇ ವ್ಯಾಸಂಗ ಮಾಡಿದರು, ಮಾಧ್ಯಮಿಕ ಶಾಲೆ ಮುಗಿದ ನಂತರ ಅವರು ಚನ್ನಪಟ್ಟಣದ ಸರ್ಕಾರಿ ಪ್ರೌಢಶಾಲೆಗೆ ಸೇರಿ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದರು. ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೂ ಓದು ಮತ್ತು ಆಟಗಳಲ್ಲಿಯೂ ಮುಂಚೂಣಿಯಲ್ಲಿದ್ದರು. ಪ್ರೌಢಶಾಲೆ ಬಿಟ್ಟ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಅಂದರೆ ಪದವಿ ಪೂರ್ವ ಶಿಕ್ಷಣಕ್ಕೆ ಸೇರಿದರು. ಆ ಸಂದರ್ಭದಲ್ಲಿ ಅವರ ತಮ್ಮ ಶ್ರೀ ಮಂಚೇಗೌಡರು ಕನಕಪುರದಿಂದ ಎತ್ತಿನಗಾಡಿಯಲ್ಲಿ ಸೌದೆ ತುಂಬಿಕೊಂಡು ಬೆಂಗಳೂರಿಗೆ ಹೋಗಿ ಅಲ್ಲಿ ಸೌದೆ ಮಾರಿ ಬಂದ ಹಣವನ್ನು ಗೌಡರ ಖರ್ಚು–ವೆಚ್ಚಗಳಿಗೆ ಕೊಡುತ್ತಿದ್ದರು.

ಗೌಡರು ವಿದ್ಯಾರ್ಥಿನಿಯಲಯದಲ್ಲಿದ್ದಾಗ ಒಮ್ಮೆ ಗೆಳೆಯರೊಡಗೂಡಿ ತುಂಟತನ ಪ್ರದರ್ಶಿಸಿದರು, ಅದರಿಂದ ಕುಪಿತಗೊಂಡ ನಿಲಯದ ಮೇಲ್ವಿಚಾರಕರು ಇವರನ್ನು ನಿಲಯದಿಂದ ಹೊರಹಾಕಿ ಊಟ ನಿಲ್ಲಿಸಿದರು, ಚತುರತೆಗೆ ಹೆಸರಾದ ಗೌಡರು ಶೂನ್ಯವೇಳೆ ಮನೆಯ ಮೇಲೆ ಹತ್ತಿ ಹೆಂಚು ತೆಗೆದು ಇಳಿದು ಅಡುಗೆ ಮನೆಯ ಒಳಹೊಕ್ಕು ಊಟ ಮಾಡಿ ಹೊರಬಂದಿದ್ದರು. ಇದು ಹೇಗೋ ಮೇಲ್ವಿಚಾರಕರಿಗೆ ಗೊತ್ತಾಗಿ ಇವರ ಚತುರತೆಯನ್ನು ಕಂಡು ವಿಸ್ಮಯಗೊಂಡರು.

ಪದವಿ ಪೂರ್ವ ಶಿಕ್ಷಣ ಪೂರ್ಣಗೊಂಡ ನಂತರ ಗೌಡರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಮೂರು ವರ್ಷಗಳ ಬಿ.ಎ. ಶಿಕ್ಷಣವನ್ನು ಪೂಜ್ಯ ಶ್ರೀ ಎಸ್. ಕರಿಯಪ್ಪ ನವರು, ಕಣಿವೆ ವಿರುಪಸಂದ್ರದ ಶ್ರೀ ಮುನಿದ್ಯಾವೇಗೌಡರು, ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಭೂಹಳ್ಳಿ ಗ್ರಾಮದ ಶ್ರೀ ಲಿಂಗೇಗೌಡರೊಡಗೂಡಿ ಪಡೆದರು.

ಬೆಂಗಳೂರು ಜಿಲ್ಲೆ, ಕನಕಪುರ ತಾಲ್ಲೂಕಿನಲ್ಲೇ ಪ್ರಪ್ರಥಮವಾಗಿ ಬಿ.ಎ. ಪದವಿ ಪಡೆದ ಈ ನಾಲ್ವರು ಮಹನೀಯರನ್ನು ಪೇಟೆ ಕೆರೆ ಸುಂಕದಕಟ್ಟೆ, ಈಗಿನ ಅಯ್ಯಪ್ಪಸ್ವಾಮಿ ದೇವಸ್ಥಾನದ

ಬಳಿ ಸಾರ್ವಜನಿಕರು ಮತ್ತು ಪುರದ ಪ್ರಮುಖರು. ಶ್ರೀಯುತ ರಾಮಯ್ಯ ಮತ್ತು ಶ್ರೀ ಮೈಯಣ್ಣರವರ ನಾಗಸ್ವರ ವಾದನದೊಡನೆ ಸ್ವಾಗತಿಸಿ ಪಟ್ಟಣಕ್ಕೆ ಬರಮಾಡಿಕೊಂಡರು. ಅನಂತರ ಆ ನಾಲ್ವರು ಮಹನೀಯರನ್ನು ಪುರಸಭಾ ಸಭಾಂಗಣ ವೇದಿಕೆಯಲ್ಲಿ ರೇಷ್ಮೆ ಶಾಲಾ ಮೈಸೂರು ಪೇಟಗಳನ್ನು ತೊಡಿಸಿ ಸನ್ಮಾನಿಸಿದರು.

5. ಗೌಡರು ಕೃಷಿ ಕಾರ್ಯದಲ್ಲಿ ತೊಡಗಿದ್ದು

ಮಹಾರಾಜ ಕಾಲೇಜಿನಲ್ಲಿ ಬಿ.ಎ ಪದವಿ ಮುಗಿಸಿ ಹೊರಬರುತ್ತಿದ್ದಾಗ ಇವರಿಗೆ ಆಂಗ್ಲ ಉಪನ್ಯಾಸಕರಾಗಿದ್ದ ಪ್ರೊ॥ ವಾಡಿಯರವರು ಮುಂದೆ ನೀವು ಯಾವ ಕ್ಷೇತ್ರಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವಿರಿ ಎಂದು ಎಂ. ಲಿಂಗೇಗೌಡರನ್ನು ಪ್ರಶ್ನಿಸಿದಾಗ ಗೌಡರು – ಕನಕಪುರ ಪಟ್ಟಣ ತಾಲ್ಲೂಕಿನ ಮುಖ್ಯ ಕೇಂದ್ರವಾಗಿದ್ದರೂ ಅಭಿವೃದ್ಧಿಯಾಗಿಲ್ಲ, ಪಟ್ಟಣದ ಅಭಿವೃದ್ಧಿಗೆ ಮತ್ತು ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುತ್ತೇನೆಂದು ಮಾತು ಕೊಟ್ಟಿದ್ದರು. ಪಟ್ಟಣದ ಅಭಿವೃದ್ಧಿಗೆ ಮುಂದಾಗುವ ಮುನ್ನ ಅವರಿಗೆ ಬಾಲ್ಯದಿಂದಲೂ ಇಷ್ಟವಾಗಿದ್ದ ಕೃಷಿ ಅಭಿವೃದ್ಧಿ ಕಾರ್ಯದಲ್ಲಿ ನಿರತರಾದರು. ಗೌಡರಿಗೆ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ, ಕಾಡಿಗೆ ಹೋಗಿ ಸೌದೆ ತರುವ ಹವ್ಯಾಸವು ಕರಗತವಾಗಿತ್ತು. ಇವೆಲ್ಲವೂ ಗೌಡರು ಪಕ್ಕಾ ವ್ಯವಸಾಯಗಾರರಾಗಿದ್ದರು ಎಂಬುದಕ್ಕೆ ಉದಾಹರಣೆಯಾಗಿದೆ, ವ್ಯವಸಾಯಗಾರರಾಗಿದ್ದ ಬಡವರ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಹಭೋಜನ ಮಾಡುತ್ತಿದ್ದರು.

ಗೌಡರ ತಂದೆಗೆ ಹದಿನೈದು ಎಕರೆ ಜಮೀನು ಇತ್ತು. ಆ ಜಮೀನನ್ನು ಶ್ರಮಪಟ್ಟು ಅಭಿವೃದ್ಧಿಪಡಿಸಿ ಉತ್ತಮ ಬೆಳೆ ಬೆಳೆದು ತಾಲ್ಲೂಕಿನ ರೈತರಿಗೆ ಮಾದರಿ ಎನಿಸಿದ್ದರು, ಇವರ ಪೂರ್ವಜರು ಗಳಿಸಿದ ಆಸ್ತಿಯನ್ನು ಹೊರತುಪಡಿಸಿ ಗೌಡರು ಯಾವುದೇ ಸ್ವಮತ ಆಸ್ತಿಯನ್ನು ಗಳಿಸಿರಲಿಲ್ಲ. ಪೂರ್ವಜರು ಗಳಿಸಿದ್ದ ಆಸ್ತಿಯಿಂದ ಬಂದ ಉತ್ಪತ್ತಿಯಲ್ಲಿ ಚೀಲೂರು ಬಳಿ ಎಂಟು ಎಕರೆ ಆಸ್ತಿಯನ್ನು ಕ್ರಯಕ್ಕೆ ಪಡೆದು ಅವರಲ್ಲಿ ಸಪೋಟ ಹಣ್ಣಿನ ಗಿಡಗಳನ್ನು ನೆಟ್ಟು ಅಭಿವೃದ್ಧಿಪಡಿಸಿದರು.

6. ಗೌಡರ ದಾಂಪತ್ಯ ಜೀವನ

ನೆಲಮಂಗಲದಲ್ಲಿ ತಹಶೀಲ್ದಾರ್ ಹುದ್ದೆಯಲ್ಲಿದ್ದ ಸನ್ಮಾನ್ಯ ಶ್ರೀ ಮುನಿವೆಂಕಟಪ್ಪನವರು ಗೌಡರ ಜೊತೆಯಲ್ಲಿ ಓದುತ್ತಿದ್ದಾಗ, ಅವರ ಆದರ್ಶ, ನಡೆ, ನುಡಿ, ಧೈರ್ಯವನ್ನು ಮನಗಂಡಿದ್ದರಿಂದ ಅವರ ತಂಗಿ ತಾಯಮ್ಮ ಎಂಬುವವರನ್ನು ಎಂ. ಲಿಂಗೇಗೌಡರಿಗೆ ಕೊಟ್ಟು ಮದುವೆ ಮಾಡಿದರು. ಮುನಿವೆಂಕಟಪ್ಪನವರು ಆಯುಕ್ತರಾಗಿ, ಅವರ ತಮ್ಮ ಡಾ॥ ರಂಗಪ್ಪನವರು ಮದ್ದೂರಿನಲ್ಲಿ ಹೆಸರಾಂತ ವೈದ್ಯರಾಗಿದ್ದರು. ಅಂತಹ ಸುಸಂಸ್ಕೃತ ಕುಟುಂಬದ ಹೆಣ್ಣುಮಗಳನ್ನು ಮದುವೆಯಾಗಿದ್ದು ಗೌಡರಿಗೆ ಸಂತಸ ತಂದಿತ್ತು. ಮದುವೆಯಾದ ಮೇಲೆ ಗೌಡರಿಗೆ ಆರು ಮಂದಿ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳಾದರು, ಗೌಡರು ಮತ್ತು ತಾಯಮ್ಮನವರು ಎಂಟು ಮಕ್ಕಳ ಲಾಲನೆ–ಪಾಲನೆಯನ್ನು ಸಮರಸದಿಂದ ನಿಭಾಯಿಸಿದರು. ಅವರ 8 ಮಕ್ಕಳಲ್ಲಿ ಹಿರಿಯ ಮಗ ಎಂ.ಎಲ್. ನಾಗರಾಜು, ಎರಡನೆಯ ಮಗ

ಎಂ.ಎಲ್. ಶ್ರೀಕಂಠು, ಮೂರನೆಯ ಮಗ ಎಂ.ಎಲ್. ರಮೇಶ್, ನಾಲ್ಕನೆಯ ಮಗ ಎಂ.ಎಲ್. ಹೇಮಚಂದ್ರ, ಐದನೆಯ ಮಗ ಎಂ.ಎಲ್. ಕೃಷ್ಣ ಮತ್ತು ಆರನೆಯ ಮಗ ಎಂ.ಎಲ್. ಶಿವಕುಮಾರ್ ಹೆಣ್ಣುಮಕ್ಕಳಲ್ಲಿ ಒಂದನೆಯ ಯಶೋಧಮ್ಮನವರು, ಎರಡನೆಯ ಮಗಳು ಹಂಸವತಿಯವರು.

7. ರಾಜಕೀಯ ಪ್ರವೇಶ

ಗೌಡರ ವಿದ್ಯೆ, ಚತುರತೆ, ಜನಸಂಘಟನೆ, ಚಾತುರ್ಯವನ್ನು ಅರಿತಿದ್ದ ಅವರ ಹಿತೈಷಿಗಳು ರಾಜಕೀಯವಾಗಿ ಸೇವೆಸಲ್ಲಿಸಲು ಪ್ರಪ್ರಥಮವಾಗಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಸದಸ್ಯತ್ವ ಸ್ಥಾನಕ್ಕೆ ಚುನಾಯಿಸಲು ನಾಮಿನೇಷನ್ ನೊಂದಾಯಿಸಲು ಪ್ರೇರೇಪಿಸಿದರು. ಕನಕಪುರ ಪಟ್ಟಣ ಮತ್ತು ಮಳಗಾಳು ಅಲ್ಲದೆ, ತಾಲ್ಲೂಕಿನ ಎಲ್ಲಾ ಹೋಬಳಿಗಳಲ್ಲಿ ಗೌಡರ ಹೆಸರು ಪ್ರಚಲಿತವಾಗಿತ್ತು. ಕನಕಪುರ ಭೂ ಅಭಿವೃದ್ಧಿ ಬ್ಯಾಂಕಿಗೆ ಸದಸ್ಯರು ಮತ್ತು ಅಧ್ಯಕ್ಷರ ಆಯ್ಕೆಯಾಗಬೇಕಿತ್ತು. ಸದಸ್ಯರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಹೆಸರು ನೊಂದಾಯಿಸಿದ್ದವರೆಲ್ಲರೂ ಗೌಡರ ಮೇಲಿನ ಪ್ರೀತಿ, ಅಭಿಮಾನ, ಗೌರವವಿದ್ದುದರಿಂದ ಅಧ್ಯಕ್ಷ ಸ್ಥಾನಕ್ಕೆ ಸಲ್ಲಿಸಿದ್ದ ಅಭ್ಯರ್ಥಿ ಅರ್ಜಿಗಳನ್ನು ಹಿಂಪಡೆದು, ಗೌಡರು ಅಧ್ಯಕ್ಷರಾಗಲು ಸದಸ್ಯರೆಲ್ಲರು ಸಮ್ಮತಿ ಸೂಚಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿ 1937 ರಿಂದ 1940 ರವರೆಗೆ ಪ್ರಥಮ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

8. ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿದ್ದಾಗ ನಡೆದ ಅಭಿವೃದ್ಧಿ ಕಾರ್ಯಗಳು

ಅಧ್ಯಕ್ಷರಾಗಿದ್ದಾಗ ರೈತರಲ್ಲಿ ಕಬ್ಬಿಣದ ನೇಗಿಲು, ಗುಳೆ, ಗುದ್ದಲಿ, ಆರೆ, ಸನಕೆ ಮುಂತಾದ ವ್ಯವಸಾಯದ ಉಪಕರಣಗಳನ್ನು ಬಳಕೆಗೆ ತಂದರು. ಸಣ್ಣ ರೈತರಿಗೆ ಎತ್ತು, ಗಾಡಿ, ತೆರೆದ ಬಾವಿ ಪಂಪ್‌ಸೆಟ್‌ಗಳನ್ನು ತೆಗೆಸಲು ಜಮೀನು ಅಭಿವೃದ್ಧಿಪಡಿಸಲು ಸಾಲ ಕೊಡಿಸಿ ರೈತರ ಅಭಿವೃದ್ಧಿಗೆ ನೆರವಾದರು.

ರೈತರ ಆರ್ಥಿಕ ಸಮಸ್ಯೆ ನಿವಾರಿಸಲು ರೇಷ್ಮೆ ಬೆಳೆ, ಅನುಕೂಲಕ್ಕಾಗಿ ಕೈಲಾಂಚ, ಕೊತ್ತನೂರು, ಮುದವಾಡಿ, ಕೋನಮಾನಹಳ್ಳಿಗಳಿಗೆ ರೇಷ್ಮೆ ಮೊಟ್ಟೆ ತಯಾರಿಕಾ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದಿಂದ ಮಂಜೂರಾತಿ ಕೊಡಿಸಿದ್ದರು.

ಚಾಕಿ ಸಾಕಾಣೆ ಕೇಂದ್ರಗಳಿಂದ ರೇಷ್ಮೆ ಮೊಟ್ಟೆಗಳನ್ನು ಪಡೆದ ರೈತರು, ಮೊಟ್ಟೆಗಳಿಂದ ಗೂಡು ಅಭಿವೃದ್ಧಿಪಡಿಸಿ ಗೂಡಿನಿಂದ ರೇಷ್ಮೆದಾರ ತೆಗೆದು ಮಾರಾಟ ಮಾಡಲು ವ್ಯವಸ್ಥೆಯಾಗಬೇಕಿತ್ತು. ದಾರವನ್ನು ರೈತರೇ ತೆಗೆಯಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಗೌಡರು ರೇಷ್ಮೆದಾರ ತೆಗೆಯುವ ಕಾರ್ಖಾನೆಗಳನ್ನು ಸ್ಥಾಪಿಸಲು ಸ್ಥಳೀಯರಿಗೆ ಅವಕಾಶ ಮಾಡಿಕೊಟ್ಟು ಅವರಿಗೆ ಕಾರ್ಖಾನೆಗಳನ್ನು ಸ್ಥಾಪಿಸಲು ಬೇಕಾಗುವ ಸಾಲ ಸೌಲಭ್ಯವನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಟ್ಟರು. ಖಾಸಗಿಯವರು ಸ್ಥಾಪಿಸಿದ ನೂಲು ತೆಗೆಯುವ ಕಾರ್ಖಾನೆಗಳಲ್ಲಿ ನೂಲು ತೆಗೆಯಲು ಸ್ಥಳೀಯರಾದ ನೂರಾರು ಜನರಿಗೆ

ನೌಕರಿ ಸಿಕ್ಕಿದ್ದುದರಿಂದ ಸ್ವಲ್ಪಮಟ್ಟಿಗೆ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಕ್ಕಿತ್ತು. ರೈತರಿಗೆ ಕಬ್ಬಿಣದ ಮುಟ್ಟುಗೋಲು, ಮರದಗಾಡಿಗಳನ್ನು ಕೊಡಿಸಿದ್ದರಿಂದ ತಾಲ್ಲೂಕಿನ ಕಮ್ಮಾರರು ಮತ್ತು ಬಡಗಿಗಳಿಗೆ ಉದ್ಯೋಗ ಸಿಕ್ಕಿದುದರಿಂದ ಅದರಿಂದಲೂ ಸ್ವಲ್ಪಮಟ್ಟಿಗೆ ತಾಲ್ಲೂಕಿನ ನಿರುದ್ಯೋಗ ಸಮಸ್ಯೆ ಪರಿಹಾರವಾಗಲು ಸಹಾಯವಾಯಿತು.

9. ಪುರಸಭಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು.

ಗೌಡರ ಸೇವಾ ತತ್ಪರತೆ ಜನಪ್ರಿಯತೆ ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲಿ ಪ್ರಚಲಿತವಾಗಿತ್ತು. ಗೌಡರು 1952 ರ ಪುರಸಭಾ ಚುನಾವಣೆಯಲ್ಲಿ ಚುನಾಯಿತರಾಗಿ, ಆ ಚುನಾವಣೆಯಲ್ಲಿ ಗೆದ್ದಿದ್ದ ಎಲ್ಲಾ ಪುರಸಭಾ ಸದಸ್ಯರ ಒಲುವಿನಿಂದ ಅಧ್ಯಕ್ಷರಾಗಿ 1956ರವರೆಗೆ ಸುದೀರ್ಘ ಸೇವೆ ಸಲ್ಲಿಸಿದ್ದರು.

ಪ್ರತಿ ತಿಂಗಳು ಪಟ್ಟಣದ ಕುಂದುಕೊರತೆ ಅಭಿವೃದ್ಧಿಯ ಬಗ್ಗೆ ಸಭೆ ಕರೆದು ಹಿಂದಿನ ಸಭೆಯಲ್ಲಿ ಚರ್ಚಿಸಿ ಆ ಬಗ್ಗೆ ತೆಗೆದುಕೊಂಡಿದ್ದ ಕಾಮಗಾರಿ ಕೆಲಸಗಳು ಪೂರ್ಣಗೊಂಡಿರುವುದರ ಬಗ್ಗೆ ಚರ್ಚಿಸಿ ಅವುಗಳಲ್ಲೇನಾದರೂ ನ್ಯೂನತೆಗಳಿದ್ದರೆ ಸರಿಪಡಿಸಿಕೊಳ್ಳಲು ಸಂಬಂಧಪಟ್ಟ ಮುಖ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸೂಚಿಸುತ್ತಿದ್ದರು. ಪ್ರತೀ ವಾರ್ಡಿನಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಆಯಾ ವಾರ್ಡಿನ ಸದಸ್ಯರು ಅಧ್ಯಕ್ಷರಿಗೆ ಮನವಿ ಸಲ್ಲಿಸುತ್ತಿದ್ದರು. ಸದಸ್ಯರು ಸಲ್ಲಿಸಿರುವ ಮನವಿಗಳ ಬಗ್ಗೆ ಪರಿಶೀಲಿಸಲು ಸಭೆ ಮುಗಿದ ಮಾರನೇ ದಿನದಿಂದಲೇ ಪುರಸಭೆಯ ಮುಖ್ಯಾಧಿಕಾರಿ, ಇಂಜಿನಿಯರ್ ಮತ್ತು ಆ ವಾರ್ಡಿನ ಸದಸ್ಯರೊಡಗೂಡಿ ಹೋಗುತ್ತಿದ್ದರು.

ಪ್ರತಿ ವಾರ್ಡುಗಳಲ್ಲಿಯೂ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳಿಗೆ ತಗಲಬಹುದಾದ ವೆಚ್ಚಕ್ಕೆ ಬೇಕಾಗಿರುವ ಆರ್ಥಿಕ ಸಹಾಯ ಕೋರಿ ಸರ್ಕಾರದ ಪೌರಾಡಳಿತ ವಿಭಾಗಕ್ಕೆ ಮನವಿ ಸಲ್ಲಿಸಿದ ನಂತರ ಕಾಮಗಾರಿಗಳಿಗೆ ಅನುಭವಿ ಗುತ್ತಿಗೆದಾರರಿಂದ (ಟೆಂಡರ್) ಕೆಲಸ ಮಾಡುವುದಾಗಿ ಒಪ್ಪಿಗೆ ಸೂಚಿಸುವಂತೆ ಕೋರುತ್ತಿದ್ದರು. ಅಲ್ಲದೆ ಅ ಕೆಲಸಕ್ಕೆ ಗುತ್ತಿಗೆದಾರರೂ ಕೋರಿಕೊಳ್ಳುವ ಮೊತ್ತವನ್ನು ನಿಗಧಿಪಡಿಸಲು ಸೂಚಿಸುತ್ತಿದ್ದರು. ಗುತ್ತಿಗೆದಾರರು ನಿಗಧಿಪಡಿಸಿ ಕೊಡುತ್ತಿದ್ದ ಪಟ್ಟಿಯಲ್ಲಿ ಕಡಿಮೆ ದರದಲ್ಲಿ ಕಾಮಗಾರಿ ಮುಗಿಸಿಕೊಡುವುದಾಗಿ ಒಪ್ಪಿದ್ದ ಗುತ್ತಿಗೆದಾರರಿಗೆ ಆ ಕಾರ್ಯವನ್ನು ವಹಿಸಿ ಆ ಕಾಮಗಾರಿಯು ಇಂತಿಷ್ಟು ದಿನದಲ್ಲಿ ಮುಗಿಯಬೇಕೆಂಬ ಷರತ್ತನ್ನು ವಿಧಿಸುತ್ತಿದ್ದರು ಮತ್ತು ಗುತ್ತಿಗೆದಾರರು ಮುಗಿಸಿಕೊಟ್ಟ ಕಾಮಗಾರಿಗಳು ಉತ್ತಮವಾಗಿ ಇವೆಯೇ? ಇಲ್ಲವೇ ಎಂಬುದನ್ನು ಪರಿಶೀಲಿಸಿ (ಕ್ವಾಲಿಟಿ ಕಂಟ್ರೋಲ್) ಗುಣನಿಯಂತ್ರಣ ಇಲಾಖೆಗೆ ಪತ್ರಬರೆದು ಅವರು ಬಂದು ಕಾಮಗಾರಿಯನ್ನು ಪರಿಶೀಲಿಸಿ ಒಪ್ಪಿಗೆ ಕೊಟ್ಟ ನಂತರ ಗುತ್ತಿಗೆದಾರರಿಗೆ ಕೊಡಬೇಕಾದ ಹಣವನ್ನು ಮಂಜೂರು ಮಾಡುತ್ತಿದ್ದರು. ಜೊತೆಗೆ ಆ ಕಾಮಗಾರಿಗಳ ಬಾಳ್ವಿಕೆಯನ್ನು ಗಮನಿಸಿ ಲೋಪವಿದ್ದರೆ ಅದನ್ನು ಸರಿಪಡಿಸಲು ಗುತ್ತಿಗೆದಾರರಿಗೆ ಕೊಡಬೇಕಾಗಿದ್ದ ಮೊತ್ತದಲ್ಲಿ ಶೇಕಡಾವಾರು ಹಣವನ್ನು ಹಿಡಿದಿಟ್ಟುಕೊಳ್ಳುತ್ತಿದ್ದರು. ನಿಗದಿಪಡಿಸಿದ್ದ ಅವಧಿಯೊಳಗೆ ಆ ಕಾಮಗಾರಿ

ಕೆಡದಿದ್ದರೆ ಹಿಡಿದಿಟ್ಟ ಹಣವನ್ನು ಹಿಂದಿರುಗಿಸುತ್ತಿದ್ದರು.

10. ಪಟ್ಟಣಾಭಿವೃದ್ಧಿಯಲ್ಲಿ ಗೌಡರ ಪಾತ್ರ

ಗೌಡರು ಪುರಸಭಾ ಅಧ್ಯಕ್ಷರಾಗಿದ್ದಾಗ ಅನೇಕ ಜನಪರಕಾರ್ಯಗಳನ್ನು ಕೈಗೊಂಡರು. ಪಟ್ಟಣದ ಜನಸಂಖ್ಯೆಯನ್ನು ಆಧರಿಸಿ ಜನಪರ ಕಾರ್ಯಗಳನ್ನು ಕೈಗೊಂಡು ಅಭಿವೃದ್ಧಿಯ ದೃಷ್ಟಿಯಿಂದ ಜಯಚಾಮರಾಜೇಂದ್ರ ಬಡಾವಣೆ, ವಿವೇಕಾನಂದ ಬಡಾವಣೆ (ಪೂರ್ ಹೌಸ್ ಬ್ಲಾಕ್), ಮುಸ್ಲಿಮ್ ಬ್ಲಾಕ್ ಬಡಾವಣೆ, ಬಾಣಂತಮಾರಮ್ಮ ಬಡಾವಣೆ, ಪೇಟೆ ಬೀದಿ ಬಡಾವಣೆ, ಮಳಗಾಳು ಬಡಾವಣೆ, ಕೋಟೆ ಬಡಾವಣೆ, ಹಲಸಿನ ಮರದ ದೊಡ್ಡಿ ಬಡಾವಣೆ, ಮೇಳೇಕೋಟೆ ಬಡಾವಣೆಗಳನ್ನು ವಿಂಗಡಿಸಿ ಜನರ ಅಭಿವೃದ್ಧಿಗಾಗಿ ಶ್ರಮಿಸಿದರು. ಅಲ್ಲದೆ ಜೆ.ಸಿ. ಬಡಾವಣೆಯಲ್ಲಿ ಸಾಕಷ್ಟು ಎಕರೆ ಜಮೀನನ್ನು ಪುರಸಭೆಗೆ ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ನಿವೇಶನಗಳಾಗಿ ವಿಂಗಡಿಸಿ ಮನೆ ಮತ್ತು ನಿವೇಶನಗಳಿಲ್ಲದ ಬಡಜನರಿಗೆ ಅತೀ ಕಡಿಮೆ ಬೆಲೆ, ಅಂದರೆ 40x60 ಅಡಿ ವಿಸ್ತೀರ್ಣವುಳ್ಳ ನಿವೇಶನಕ್ಕೆ ತಲಾ ನಾಲ್ಕುನೂರು ರೂಪಾಯಿಗಳಿಗೆ ಪುರಸಭೆಯಿಂದ ಕ್ರಯ ಮಾಡಿಕೊಟ್ಟು ನಿವೇಶನದಾರರು ಮನೆಗಳನ್ನು ಕಟ್ಟಿ ನೆಮ್ಮದಿಯಿಂದ ವಾಸ ಮಾಡಲು ಅನುವು ಮಾಡಿಕೊಟ್ಟಿದ್ದಲ್ಲದೆ ಮನೆಗಳನ್ನು ಕಟ್ಟಲು ಸಾಲವನ್ನು ಮಂಜೂರು ಮಾಡಿಸಿಕೊಟ್ಟಿದ್ದರು.

ಪುರಸಭಾ ವ್ಯಾಪ್ತಿಯ ಜನರಿಗೆ ಕುಡಿಯುವ ನೀರಿನ ಬವಣೆ ತಪ್ಪಿಸಲು ಜೆ.ಸಿ. ಬಡಾವಣೆಯ ಹಲಸಿನಮರದ ದೊಡ್ಡಿ ಮತ್ತು ಬಾಣಂತಮಾರಮ್ಮ ಬಡಾವಣೆಯಲ್ಲಿ ಎತ್ತರದ ನೀರು ಸಂಗ್ರಹಾಲಯದ ತೊಟ್ಟಿಗಳನ್ನು ಕಟ್ಟಿಸಿ ಅವುಗಳಿಗೆ ಈಗಿನ ಅರ್ಕಾವತಿ ಸೇತುವೆ ಬಳಿ ಇರುವ ಸಂಗ್ರಹಾಲಯದಿಂದ ನೀರು ತುಂಬಿಸುವ ಏರ್ಪಾಟು ಮಾಡಿದ್ದರು. ಕಾರಣ ಆಗಿನ ಕಾಲದಲ್ಲಿ ಪುರದ ಪ್ರಜೆಗಳು ಕುಡಿಯುವ ನೀರು ತರಲು ಬಟ್ಟೆ ತೊಳೆಯಲು ಅರ್ಕಾವತಿ ಹೊಳೆಗೆ ಹೋಗುತ್ತಿದ್ದರು. ಅಂದು ಅರ್ಕಾವತಿ ಹೊಳೆ ಮೂರು ಅಡಿ ಎತ್ತರದ ದಡಗಳ ಮಧ್ಯೆ ಹೊಳೆಯುವ ಮರಳಿನ ಮೇಲೆ ಹರಿಯುತ್ತಿತ್ತು. ಹೊಳೆಯಲ್ಲಿ ಬಿಡುವಿರುವ ಜಾಗದಲ್ಲಿ ಜಿಲುಮೆ ತೋಡಿ ನದಿ ನೀರನ್ನು ಹೊರಹಾಕಿ ಶುದ್ಧನೀರನ್ನು ಕೊಡಗಳಲ್ಲಿ ತುಂಬಿಕೊಂಡು ಬರುತ್ತಿದ್ದರು. ಆದರೂ ಕೆಲವೊಮ್ಮೆ ಕುಡಿಯುವ ನೀರು ಚರಂಡಿಗಳಲ್ಲಿಲ್ಲದ ಕೊಳಚೆ ನೀರಿನ ಪ್ರಭಾವದಿಂದ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಯುವುದೇ ಶುದ್ಧನೀರು ಸರಬರಾಜಿನ ವ್ಯವಸ್ಥೆಗೆ ಕಾರಣವಾಯಿತು.

ಬಡಾವಣೆಗಳು ಬೆಳೆದಂತೆ ಜನಸಂಖ್ಯೆಯು ಹೆಚ್ಚುತ್ತಾ ಹೋಯಿತು. ಈಗಿನಂತೆ ಡಾಂಬರೀಕರಣದ ರಸ್ತೆಯಾಗಲೀ, ಕಾಂಕ್ರೀಟ್ ಸಿಮೆಂಟ್ ರಸ್ತೆಗಳಾಗಲಿ ಇರಲಿಲ್ಲ. ಜನರು ಮಣ್ಣಿನ ರಸ್ತೆಗಳ ಮೇಲೆ ತಿರುಗಾಡುತ್ತಿದ್ದರು. ಮಳೆ ಬಂದಾಗ ಬಿದ್ದ ನೀರು ಮಣ್ಣಿನ ರಸ್ತೆಗಳನ್ನು ಕೆಸರು ಮಾಡುತ್ತಿದ್ದುದಲ್ಲದೇ ನೀರಿನ ಹೊಂಡಗಳು ಉಂಟಾಗುತ್ತಿದ್ದವು. ನೀರು ಕೊಳೆತು ಸೊಳ್ಳೆಗಳ ಕಾಟ ಹೆಚ್ಚಾಗುತ್ತಿತ್ತು. ಇದನ್ನು ಅರಿತದ್ದ ಗೌಡರು ಪಟ್ಟಣದ ಪ್ರತಿಯೊಂದು ಬಡಾವಣೆಗಳಲ್ಲಿ ಬಿದ್ದ ಮಳೆಯ ನೀರು ಸರಾಗವಾಗಿ ಹರಿದು ಹೋಗಲು ಕಲ್ಲುಚಪ್ಪಡಿಯ ಚರಂಡಿಗಳ ವ್ಯವಸ್ಥೆ ಮಾಡಿದರು.

ಜಯಚಾಮರಾಜೇಂದ್ರ ಬಡಾವಣೆಯ ಈಗಿನ 5ನೇ ವಾರ್ಡಿನಲ್ಲಿ ಸುಮಾರು (ಇಪ್ಪತ್ತು) 20 ಎಕರೆ ಭೂಮಿಯನ್ನು ಸರ್ಕಾರದಿಂದ ಪುರಸಭೆಗೆ ಮಂಜೂರು ಮಾಡಿಸಿಕೊಂಡು ಪುರಸಭಾ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಕಟ್ಟಿರುವ ಕಟ್ಟಡಗಳ ದಕ್ಷಿಣ ದಿಕ್ಕಿನಲ್ಲಿ ವಿಶಾಲವಾದ ಆಟದ ಮೈದಾನವನ್ನು ವ್ಯವಸ್ಥೆ ಮಾಡಿ ವಿದ್ಯಾರ್ಥಿಗಳ ದೈಹಿಕ ಶಿಕ್ಷಣಕ್ಕೆ ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯದಿನೋತ್ಸವ, ಸ್ವಾತಂತ್ರ್ಯ ದಿನಾಚರಣೆಗಳಲ್ಲದೆ ಕ್ರೀಡಾ ಉತ್ಸವಗಳು, ಸಾರ್ವಜನಿಕ ಸಭೆ ಸಮಾರಂಭಗಳು ನಡೆಯಲು ಅನುವು ಮಾಡಿಕೊಟ್ಟರು. ಮಳಗಾಳಿನಲ್ಲಿ ಇದ್ದ ಹರಿಜನ ಕುಟುಂಬಗಳಿಗೆ ಉಚಿತವಾಗಿ ನಿವೇಶನ, ಆರ್ಥಿಕ ಸೌಲಭ್ಯ ಒದಗಿಸಿಕೊಟ್ಟಿದ್ದರು. ಕನಕಪುರ ಪಟ್ಟಣ ಮತ್ತು ತಾಲ್ಲೂಕಿನ ವ್ಯಾಪ್ತಿಯಲ್ಲಿ ಗ್ರಾಮಾಂತರ ವಿವಿದ್ದೋದ್ದೇಶ ಪ್ರೌಢಶಾಲೆಯೊಂದನ್ನು ಬಿಟ್ಟರೆ ಇನ್ನೆಲ್ಲಿಯೂ ಪ್ರೌಢಶಾಲೆಗಳು ಇರಲಿಲ್ಲ. ಪಟ್ಟಣ ಮತ್ತು ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತೊಂದು ಪ್ರೌಢಶಾಲೆ ಅವಶ್ಯಕವಾಗಿ ಬೇಕಾಗಿತ್ತು.

ಕರಿಯಪ್ಪನವರು ಮತ್ತು ಎಂ. ಲಿಂಗೇಗೌಡರು ಒಡನಾಡಿಗಳಾಗಿದ್ದು ಕರಿಯಪ್ಪನವರ ಸಲಹೆಯಂತೆ ಪುರ ಪ್ರೌಢಶಾಲೆ ಯನ್ನು 1943 ರಲ್ಲಿ ಚನ್ನಬಸಪ್ಪ ವೃತ್ತದಲ್ಲಿದ್ದ ಕೆ.ಪಿ. ಶ್ರೀಕಂಠಯ್ಯನವರ ಕಟ್ಟಡದಲ್ಲಿ ಪ್ರಾರಂಭಿಸಿದರು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ ನಂತರ ಪಟ್ಟಣದ ಈಗಿನ ಕ್ರೀಡಾಂಗಣದ ಪಕ್ಕದಲ್ಲಿ ಸರ್ಕಾರದ ಅನುಮತಿ ಪಡೆದು ಬಿ.ಡಿ. ಜತ್ತಿಯವರು ಮುಖ್ಯ ಮಂತ್ರಿಯಾಗಿದ್ದಾಗ ಪುರ ಪ್ರೌಢಶಾಲೆಯನ್ನು ಕಟ್ಟಿಸಿ, ದಿವಾನ್ ಮಾಧುರಾವ್‌ರವರಿಂದ ಉದ್ಘಾಟನೆ ಮಾಡಿಸಿ ನೂರಾರು ಮಕ್ಕಳಿಗೆ ವಿದ್ಯಾರ್ಜನೆ ಮಾಡಲು ಅನುವು ಮಾಡಿಕೊಟ್ಟರು.

ಈಗಿನ ಮುಸ್ಲಿಮ್ ಬ್ಲಾಕಿನ ಪುರಸಭೆ ಜಾಗದಲ್ಲಿ ಕಾಳಮ್ಮ ದೇವಸ್ಥಾನವಿದ್ದು ನಮಾಜ್ ವೇಳೆಯಲ್ಲಿ ದೇವಸ್ಥಾನದಲ್ಲಿ ನಡೆಯುತ್ತಿದ್ದ, ಪೂಜೆವೇಳೆ ಘಂಟೆ ಶಬ್ದವಾಗುತ್ತಿದ್ದುದ್ದರಿಂದ ನಮಾಜ್‌ಗೆ ತೊಂದರೆ ಮಾಡುತ್ತಿದ್ದಾರೆಂದು ಮುಸ್ಲಿಂಮರು ಹಿಂದುಗಳ ಮೇಲೆ ಹರಿಹಾಯ್ದರು. ಈ ಹಿನ್ನೆಲೆಯಲ್ಲಿ ಮುಸ್ಲಿಮರು ಮತ್ತು ಹಿಂದೂಗಳಲ್ಲಿ ಘರ್ಷಣೆ ಉಂಟಾಗಿ ಮುಸ್ಲಿಮರು ಹಿಂದುವೊಬ್ಬರ ಬಲ ತೋಳನ್ನು ಕತ್ತರಿಸಿದ್ದರಿಂದ ಪರಿಸ್ಥಿತಿಯು ಉದ್ವಿಗ್ನಗೊಂಡಿತ್ತು. ಅದನ್ನು ತಪ್ಪಿಸಲು ಗೌಡರು ಹಿಂದು – ಮುಸ್ಲಿಮರ ಸಭೆ ಕರೆದು ಚರ್ಚಿಸಿ ಒಮ್ಮತದ ತೀರ್ಮಾನ ತೆಗೆದುಕೊಂಡು ಮುಸ್ಲಿಮ್ ಬ್ಲಾಕಿನಲ್ಲಿ, ಪುರಸಭೆ ಜಾಗದಲ್ಲಿದ್ದ ಕಾಳಮ್ಮನ ದೇವಸ್ಥಾನವನ್ನು ತೆರವುಗೊಳಿಸಿ ಈಗಿನ ಕಲ್ಯಾಣಿ ಪಕ್ಕದ ಪರಸಭೆಗೆ ಸೇರಿದ್ದ ಜಾಗದಲ್ಲಿ ಕಾಳಮ್ಮ ದೇವಸ್ಥಾನವನ್ನು ಕಟ್ಟಿಸಿ ವಿಶ್ವಕರ್ಮ ಸಮುದಾಯದ ಭಕ್ತರಿಗೆ ಸಮರ್ಪಣೆ ಮಾಡಿದರು.

ಹಿಂದು – ಮುಸ್ಲಿಮ್ ಭಾವೈಕ್ಯತೆಗೆ ನಾಂದಿಯಾಗಲು ಶರೀಫ್ ಸಾಹೇಬರು, ಬಂಡಿ ವೀರಯ್ಯನವರು, ಮುನಿನಾಗಯ್ಯನವರು, ಮೈಮನಹಳ್ಳಿ ಪಟೇಲ್ ದೇವೇಗೌಡರು, ಮೇಗಳ ಬೀದಿ ಕೆಂಚಪ್ಪನವರು, ಪೀರ್‌ಸಾಹೇಬರು, ಜಬ್ಬಾರ್ ಸಾಹೇಬರು, ಮೆಳೆಕೋಟೆ ಅಬ್ದುಲ್‌ನಬಿ ಸಾಹೇಬರು ಸಹಕಾರ ನೀಡಿದರು.

‘ಪಟ್ಟಣ ಪ್ರಜೆಗಳಿಗಲ್ಲದೆ, ಗ್ರಾಮಾಂತರ ಪ್ರದೇಶದ ರೈತರಿಗೆ ನೀರಾವರಿ ಸೌಲಭ್ಯಕ್ಕಾಗಿ

ಮೈಸೂರು ಮಹಾರಾಜರ ಆಳ್ವಿಕೆಯಿದ್ದಾಗ ಗೌಡರು ಸಮನ್ವಯ ಸಮಿತಿ ಸದಸ್ಯರಾಗಿದ್ದಾಗ ತಾಲ್ಲೂಕಿನ ಮಾವತ್ತೂರು ಕೆರೆಯ ಬಳಿ ಕೆರೆ ಕಟ್ಟಿಸಿದ್ದರು. ಕನಕಪುರದಿಂದ ಬೆಂಗಳೂರಿಗೆ ಹೋಗಲು ಅರ್ಕಾವತಿ ಹೊಳೆಯನ್ನು ದಾಟಿ ಹೋಗಬೇಕಾಗಿತ್ತು. ಅದನ್ನು ಮನಗಂಡ ಗೌಡರು ಅರ್ಕಾವತಿ ಹೊಳೆಗೆ ಸೇತುವೆ ಕಟ್ಟಿಸಿದ್ದರು. ಮಾವತ್ತೂರು ಬಳಿ ಕಟ್ಟಿಸಿದ ಕೆರೆ ಮತ್ತು ಅರ್ಕಾವತಿ ನದಿ ಸೇತುವೆಗಳ ಶಂಕು ಸ್ಥಾಪನೆಗೆ ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಬಹದ್ದೂರ್ ಮತ್ತು ಮೈಸೂರು ರಾಜ್ಯದ ದಿವಾನರಾಗಿದ್ದು ಹೆಸರಾಂತ ಇಂಜಿನಿಯರ್ ಆಗಿದ್ದ ಸರ್. ಎಂ. ವಿಶ್ವೇಶ್ವರಯ್ಯ ರವರನ್ನು ಆಹ್ವಾನಿಸಿದ್ದರು. ಅವುಗಳ ಲೋಕಾರ್ಪಣೆಯನ್ನು ಮೈಸೂರು ಮಹಾರಾಜರ ಆಸ್ಥಾನದ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಅಯ್ಯಂಗಾರ್‌ರಿಂದ ಮಾಡಿಸಿದ್ದರು.

ಪಟ್ಟಣದ ಅಭಿವೃದ್ಧಿಗೆ ಬೇಕಾದ ಧನ ಸಂಗ್ರಹಣೆಗಾಗಿ ಸರ್ಕಾರದ ಅನುದಾನದ ಜೊತೆಗೆ ಸಾರ್ವಜನಿಕರಿಗೆ ಹೊರೆಯಾಗದ ರೀತಿಯಲ್ಲಿ ಪಟ್ಟಣದ ನಾಲ್ಕು ದಿಕ್ಕುಗಳಲ್ಲಿ ಸುಂಕದ ಕಟ್ಟೆಗಳನ್ನು ತೆರೆದು ಪಟ್ಟಣಕ್ಕೆ ಹೋಗಿ ಬರುತ್ತಿದ್ದ ಸರಕು ಸಾಗಣೆ ವಾಹನಗಳ ಮೇಲೆ ಸಂತೆಯ ದಿನ ಅಂಗಡಿ ಮುಂಗಟ್ಟುಗಳ ಮೇಲೆ ಶುಲ್ಕ ವಿಧಿಸುವುದರ ಜೊತೆಗೆ ಮನೆಗಳ ಮೇಲೆ ಕಂದಾಯ ಮತ್ತು ನೀರಿನ ತೆರಿಗೆಯನ್ನು ವಿಧಿಸಿ ಧನ ಸಂಗ್ರಹ ಮಾಡುತ್ತಿದ್ದರು.

11. 1956 ರ ಚುನಾವಣೆಯಲ್ಲಿ ಮೈಸೂರು ಶಾಸನ ಸಭೆಗೆ ಶಾಸಕರಾಗಿ ಆಯ್ಕೆ

1952ರಿಂದ 1956 ರವರೆಗೆ ಪುರಸಭಾ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷರಾಗಿದ್ದರು. 1956ರಲಿ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಮೈಸೂರು ಶಾಸನ ಸಭೆಗೆ ಶಾಸಕರಾಗಲು ಸಮಾಜವಾದಿ ಪಕ್ಷದಿಂದ ಕೆ.ಜಿ. ತಿಮ್ಮೇಗೌಡರ ಪ್ರತಿಸ್ಪರ್ಧಿಯಾಗಿ ಗೆದ್ದರು. ಆ ಸಂದರ್ಭದಲ್ಲಿ ಗೌಡರಿಗೆ ಪೀರ್‌ಸಾಹೇಬರು, ಉಸ್ಮಾನ್ ಸಾಹೇಬರು, ಮೊಹಮ್ಮದ್ ಶರೀಫ್ ಸಾಹೇಬರು, ಬಾಬಾ ಸಾಹೇಬರು, ಬಂಡಿ ವೀರಯ್ಯ ಶೆಟ್ಟರು, ಮರಳೆ ಬೇಕುಪ್ಪೆ ಪರಶಿವಯ್ಯನವರು, ಕನಕಪುರದ ಕಾಶೀಪತಿಯವರು, ಚಿರಂತಿ ರುದ್ರಣ್ಣನವರು, ತಿಮ್ಮಪ್ಪ ರೆಡ್ಡಿಯವರು, ಗೂಡೆ ನಾರಾಯಣ ಶೆಟ್ಟಿಯವರು, ಮಿಲ್ಲಿನ ಹುಚ್ಚಪ್ಪನವರು, ಹೇಮೋಜಿರಾವ್‌ರವರು, ವೆಂಕಟರಮಣೇಗೌಡರು, ಚುನಾವಣೆಯಲ್ಲಿ ಗೌಡರಿಗೆ ಬೆಂಬಲವಾಗಿ ನಿಂತರು. ಇವರ ಜೊತೆಗೆ ಮಳಗಾಳು ಕೆಂಪೇಗೌಡರು, ಮುನಿಸಾಗಯ್ಯನವರು ಹೊನ್ನೇಗೌಡ ಉರುಫ್ ಬಕ್ರೇಗೌಡರು, ಮೈಮನಹಳ್ಳಿ ಪಟೇಲ್ ದೇವೇಗೌಡರು, ಕಾಂತಿ ಶೆಟ್ಟರು, ಕೋಟೆ ಕುಂಟರಾಮಯ್ಯನವರು, ನಾಗಪ್ಪನವರು, ಕೀ ಕೀ ಶೆಟ್ಟರು, ಹಣ್ಣಿನ ಅಂಗಡಿ ದಾಸಶೆಟ್ಟರು ಮೇಗಳ ಬೀದಿ ಕೆಂಚಪ್ಪ ಶೆಟ್ಟರು ಸಹಕರಿಸಿದ್ದರು.

ಕೆ.ಜಿ. ತಿಮ್ಮೇಗೌಡರು, ಲಿಂಗೇಗೌಡರಿಗೆ 1956ರ ಶಾಸನ ಸಭೆಗೆ ಪ್ರತಿಸ್ಪರ್ಧಿಯಾಗಿ ನಿಂತಿದ್ದಾಗ, ತಿಟ್ಟಮಾರನಹಳ್ಳಿ ವೆಂಕಟಪ್ಪನವರು, ಲಿಂಗೇಗೌಡರನ್ನು ಕಂಡು, ತಿಮ್ಮೇಗೌಡ ನನ್ನ ಅಕ್ಕನ

ಮಗ, ನಿಮಗೆ 50 ಸಾವಿರ ದುಡ್ಡು ಕೊಡುತ್ತೇನೆ. ನಿಮ್ಮ ನಾಮಪತ್ರ ಹಿಂಪಡೆಯಿರಿ ಎಂದು ಹೇಳಿದಾಗ ನೀವು ಕೊಡುವ 50 ಸಾವಿರ ರೂಪಾಯಿಗಳನ್ನು ಜನತಾ ಪರಿವಾರ ತಲಾ ಒಂದು ರೂ ಕೊಟ್ಟರು ಆಗುತ್ತದೆ, ನಿಮ್ಮಿಂದ ಹಣ ತೆಗೆದುಕೊಂಡು ನಾಮಪತ್ರವನ್ನು ಹಿಂಪಡೆದ ಮೇಲೆ ಜನರಿಗೆ ಮುಖ ತೋರಿಸಲು ಸಾಧ್ಯವೇ, ನಾನು ಬಡವರ ಪ್ರತಿನಿಧಿ 'ಕೇಳಿದರೆ ನೋಟು ಓಟು ಎರಡನ್ನು ಕೊಡುತ್ತಾರೆ' ಎಂದು ಹೇಳಿ ಅವರ ಆಹ್ವಾನವನ್ನು ನಿರಾಕರಿಸಿದರು. ಇದರಿಂದ ಕುಪಿತಗೊಂಡ ತಿಮ್ಮೇಗೌಡರು, ಲಿಂಗೇಗೌಡರ ವಿರುದ್ಧ ಕಾಂಗ್ರೇಸ್ ಪ್ರಚಾರಕ್ಕಾಗಿ 240 ಜೊತೆ ಎತ್ತಿನಗಾಡಿಗಳನ್ನು ಈಗಿನ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿ, ಅಂದರೆ ಆಗಿನ ಸಂತೆ ಮಾಳದಲ್ಲಿ ಸೇರಿಸಿದ್ದುದ್ದನ್ನು ನೋಡಿದ್ದ ಜನರು ಧಿಗ್‌ಭ್ರಾಂತರಾಗಿ ಲಿಂಗೇಗೌಡರಿಗೆ ಸೋಲು ಖಂಡಿತ ಎಂದು ಮಾತನಾಡಿಕೊಳ್ಳುತ್ತಿದ್ದರು. ಆಕರ್ಷಣಾ ಶಕ್ತಿ, ಚತುರತೆ, ಯಾವುದೇ ಸಮಯದಲ್ಲಿ ಸಮ್ಮೋಹನಾಸ್ತ್ರ ಪ್ರಯೋಗಿಸುವ ಶಕ್ತಿ ಲಿಂಗೇಗೌಡರಿಗಿತ್ತು. ಲಿಂಗೇಗೌಡರಿದ್ದಲ್ಲಿ ಜನ – ಜನರಿದ್ದಲ್ಲಿ ಗೌಡರು ಎಂಬ ಮಾತು ಜನ ಜನಿತವಾಗಿತ್ತು. ಎತ್ತಿನಗಾಡಿ ಮೆರವಣಿಗೆ ಮುಗಿದು ಹೋದಮೇಲೆ ಲಿಂಗೇಗೌಡರು ಆ ಸಭೆಗೆ ಮಾಸಲು ಜುಬ್ಬ ಪಂಚೆತೊಟ್ಟು ಬಂದಿದ್ದರು. ಅಲ್ಲಿ ನೆರೆದಿದ್ದ ಜನಸಮೂಹವನ್ನು ಕುರಿತು 'ಗಾಡಿಗಳನ್ನು ನೋಡಿ' ನೀವು ಗಾಬರಿಪಡಬೇಕಾಗಿಲ್ಲ ಅವು ನಮ್ಮ ನೆಂಟರಗಾಡಿಗಳು' ಅವರು ಸಾವಿರಾರು ಎಕರೆ ಜಮೀನುದಾರರು, ಅವರು ಹೇಳಿದಂತೆ ರೈತರು ಕೇಳಲೇಬೇಕು. ಆದುದರಿಂದ ರೈತರು ಎತ್ತಿನ ಗಾಡಿಗಳನ್ನು ತಂದಿದ್ದರು. ನೀವು ಯಾರು ಹೆದರಬೇಕಾಗಿಲ್ಲ ಎಂದು ಗೌಡರು ತಮ್ಮ ಚತುರತೆ ಮತ್ತು ಚಾಕಚಕ್ಯತೆಯಿಂದ ಜನರಿಗೆ ಉತ್ತರ ನೀಡಿ ಧೈರ್ಯ ತುಂಬಿದ್ದರು'.

ಗೌಡರು ಮೈಸೂರು ರಾಜ್ಯದ ಶಾಸನ ಸಭೆಗೆ ಶಾಸಕರಾಗಿ ಆಯ್ಕೆಯಾದರು ಅಲ್ಲದೆ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದರು. ಈಗಿನ ಕರ್ನಾಟಕ ರಾಜ್ಯದ ಶಾಸಕರು ಮಂತ್ರಿ – ಮಹೋದಯರು ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ ಜನತಾದರ್ಶನ ನೀಡಿ ಅವರ ಕುಂದು – ಕೊರತೆಗಳನ್ನು ಆಲಿಸಿ ಮನವಿಗಳನ್ನು ಸ್ವೀಕರಿಸಿ ಪರಿಹಾರ ನೀಡುವುದಾಗಿ ವಾಗ್ದಾನ ನೀಡುತ್ತಿದ್ದರು. ಹಿಂದೆ ಶಾಸಕರಾಗಲಿ, ಮಂತ್ರಿ – ಮಹೋದಯರಾಗಲಿ ಜನಸಂದರ್ಶನ ಪದ್ಧತಿಯನ್ನು ಇಟ್ಟುಕೊಂಡು ಜನರ ಅಹವಾಲುಗಳನ್ನಾಗಲಿ, ಮನವಿಗಳನ್ನಾಗಲಿ ಸ್ವೀಕರಿಸಿ ಜನತೆಯ ಭಾವನೆಗಳಿಗೆ ಸ್ಪಂದಿಸಿ ಪರಿಹಾರ ನೀಡುವ ಪದ್ಧತಿ ಇರಲಿಲ್ಲ. ಆದರೆ ಗೌಡರು ಜನತಾ ಸಂದರ್ಶನಾ ಪದಕ್ಕೆ ಪರ್ಯಾಯವಾಗಿ ಜನ ಸಂಪರ್ಕ ಸಭೆಯನ್ನು ಕನಕಪುರ ಪಟ್ಟಣದ ಪುರಸಭೆಯ ಕಟ್ಟಡದಲ್ಲಿ ಶಂಕರ ರಾಯರು ನಡೆಸುತ್ತಿದ್ದ ಉಪಹಾರ ಗೃಹ ಅಂದರೆ ಗೋಪಿ ಹೋಟೆಲ್ ಮುಂದಿನ ಗುಂಡು ತೋಪು ಸಂತೆ ಮಾಳದಲ್ಲಿ ಪ್ರತಿ ಗುರುವಾರ ನಡೆಯುತ್ತಿದ್ದ ಸಂತೆ ಸಮಯದಲ್ಲಿ ಗೋಪಿ ಹೋಟೆಲ್ ಮುಂಭಾಗದ ಕಲ್ಲು ಬೆಂಚಿನ ಮೇಲೆ ಕುಳಿತುಕೊಳ್ಳುತ್ತಿದ್ದರು. ಗೌಡರು ಪ್ರತೀ ಗುರುವಾರ ಸಂತೆ ನಡೆಯುವ ಸಮಯದಲ್ಲಿ 8:00 ಗಂಟೆಗೆ ಸರಿಯಾಗಿ ಬರುತ್ತಾರೆಂಬುದು ಕನಕಪುರ ತಾಲ್ಲೂಕಿನ ಹಾಗೂ ಹೋಬಳಿ ಗ್ರಾಮಗಳ ಜನರಿಗೆ ತಿಳಿದಿತ್ತು. ಜನರು ತಮ್ಮ ದುಗುಡ – ದುಮ್ಮಾನಗಳನ್ನು ಅವುಗಳಿಗೆ ಪರಿಹಾರವನ್ನು

ಕೇಳಲು ತಪ್ಪದೇ ಬರುತ್ತಿದ್ದರು. ಅವರಿಗೆ ಗೌಡರು ಅವರ ಕೌಟುಂಬಿಕ ಸಮಸ್ಯೆಗಳಾಗಿರಲಿ, ಆರೋಗ್ಯ ಸಮಸ್ಯೆಯಾಗಿರಲಿ, ಕೃಷಿ ಸಮಸ್ಯೆಯಾಗಿರಲಿ, ಅವುಗಳನ್ನು ಪರಿಹರಿಸಿಕೊಡುತ್ತಿದ್ದರು.

ಜನರ ಆರೋಗ್ಯಕ್ಕೆ ಸಂಬಂಧಪಟ್ಟ ಕಷ್ಟಗಳಿಗೆ ಸ್ಪಂಧಿಸಿ ರೋಗಿಗಳ ಉಪಚಾರಕ್ಕೆ ಗೌಡರು ತಮ್ಮ ಕೈಯಲ್ಲಾದ ಧನ ಸಹಾಯವನ್ನು ನೀಡುತ್ತಿದ್ದರು. ಜನರು ಗೌಡರ ಹೃದಯ ವೈಶಾಲ್ಯತೆಯನ್ನು ಮೆಚ್ಚಿ ತಮ್ಮ ಕೃತಜ್ಞತೆಯನ್ನು ಅವರಿಗೆ ವಂದಿಸುವ ಮೂಲಕ ಸಮರ್ಪಿಸುತ್ತಿದ್ದರು. ಬಂದ ಜನರಿಗೆ ವಂದಿಸಿ ಅಂದಿನ ಸಂತೆ ಮುಗಿದ ನಂತರ ಜನಸಂಪರ್ಕ ಕಾರ್ಯವನ್ನು ಮುಕ್ತಾಯಗೊಳಿಸಿ ತಮ್ಮ ಊರು ಮಳಗಾಳಿಗೆ ಹೋಗುತ್ತಿದ್ದರು. ಊರಿಗೆ ಗೌಡರು ಕಾಲಿಟ್ಟ ಕೂಡಲೆ ಮನೆಗಳ ಮುಂದಿನ ಪಡಸಾಲೆಗಳಲ್ಲಿ ಕುಳಿತಿದ್ದ ಜನರು ಎದ್ದು ನಿಂತು ಗೌರವಿಸುತ್ತಿದ್ದರು.

ಕರ್ನಾಟಕ ಏಕೀಕರಣವಾದ ಮೇಲೆ ರಾಜರ ಆಳ್ವಿಕೆಯ ಮೈಸೂರು ರಾಜ್ಯ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿತ್ತು. ಆ ಸಂದರ್ಭದಲ್ಲಿ ಮೈಸೂರು ಮಹಾರಾಜರ ಸರ್ಕಾರದ ಪರವಾಗಿ ಹೆಚ್.ವಿ ಗುಂಡಪ್ಪ ಗೌಡರು ಕೆ.ಹೆಚ್. ರಾಮಯ್ಯನವರು, ಹೆಚ್.ಸಿ ದಾಸಪ್ಪನವರು ಮಹಾರಾಜರ ಸರ್ಕಾರದ ಪರವಾಗಿದ್ದರು. ಅವರೆಲ್ಲರು ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರ ವಿರುದ್ಧವಾಗಿ ವಿರೋಧ ಪಕ್ಷ ಕಟ್ಟಿದ್ದರು. ಆ ಪಕ್ಷಕ್ಕೆ ಎಂ. ಲಿಂಗೇಗೌಡರು ಸೇರಿಕೊಂಡಿದ್ದರು. ಆಂಗ್ಲ ಸರ್ಕಾರದ ವಿರುದ್ಧವಾಗಿ 1947ಕ್ಕೂ ಹಿಂದೆ ಮಹಾರಾಜರು ಕಾಂಗ್ರೆಸ್ ಸರ್ಕಾರದ ವಿರುದ್ಧ ಒಕ್ಕಲಿಗ ಜನಾಂಗದ ಪ್ರಮುಖರ ಗುಂಪಿಗೆ ಇವರು ಸೇರಿದ್ದರು. ಅಂದು ದಿವಾನ್ ಮಿರ್ಜಾ ಇಸ್ಮಾಯಿಲ್ ಕಾಂಗ್ರೆಸ್ ಸರ್ಕಾರದ ಪರಿವಾಗಿದ್ದಾಗ ಎಸ್. ಕರಿಯಪ್ಪನವರು ಸಹ ಕಾಂಗ್ರೆಸ್ ಪರವಾಗಿದ್ದರು. ಅದೇ ಸಮಯದಲ್ಲಿ ಎಂ. ಲಿಂಗೇಗೌಡರು ಮಹಾರಾಜರ ಸರ್ಕಾರದ ಪರವಾಗಿದ್ದರು.

ರಾಜಕೀಯದಲ್ಲಿ ಅಜಾತಶತ್ರುವಾಗಿದ್ದ ಗೌಡರು ಸರ್ವರೊಡನೆಯು ಒಗ್ಗಟ್ಟು ಮೂಡಿಸಿ ಬೆರೆಯುತ್ತಿದ್ದರು. ಅಧಿಕಾರಿಗಳಿಗೆ ಹೆಚ್ಚಿನ ಗೌರವ ಕೊಡುತ್ತಿದ್ದರು. ವಾಹನಗಳಿಗೆ ಇಂಧನ ತುಂಬಿಸಿಕೊಳ್ಳಲು ಬೆಂಗಳೂರಿಗೆ ಹೋಗಬೇಕಾಗಿತ್ತು. ವಾಹನದಾರರ ತೊಂದರೆಯನ್ನು ಮನಗಂಡು ಸಿಲಾಸ್ ಕೋಟೆ ಮರಿಯಪ್ಪನವರ ಹೆಸರಿಗೆ ಇಂಧನ ಸಂಗ್ರಹ ನೆಲಮಾಳಿಗೆಯನ್ನು (ಪೆಟ್ರೋಲ್ ಬಂಕ್) ಮಂಜೂರು ಮಾಡಿಸಿದ ನಂತರ ಕನಕಪುರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ನಿಯಮಿತ ಸಂಘಕ್ಕೆ ವಹಿಸಿಕೊಡಲಾಯಿತು.

12. ವಿರೋಧ ಪಕ್ಷದವರಿಗೆ ಔಪಚಾರಿಕವಾಗಿ ಅತಿಥಿ ಸತ್ಕಾರ

ಗೌಡರ ಮನೆಗೆ ರಾಜಕೀಯ ವಿರೋಧಿಗಳು ಹೋದಾಗ ಅವರಿಗೆ ಕಾಫಿ, ತಿಂಡಿ, ಊಟೋಪಚಾರ ನಡೆಯುತ್ತಿತ್ತು. ಅಲ್ಲಿದ್ದ ಗೌಡರ ಕಡೆಯವರು ಇದನ್ನು ನೋಡಿ ವಿರೋಧ ಪಕ್ಷದವರಿಗೆ ಉಪಚರಿಸುತ್ತಿದ್ದೀರಲ್ಲಾ.... ಇದು ಹೇಗೆ ಎಂದು ಪ್ರಶ್ನಿಸಿದರೆ ಗೌಡರು ವಿರೋದ ಪಕ್ಷದವರು ನಮ್ಮ ಗೆಳೆಯರೆ ಎಂದು ಉತ್ತರಿಸುತ್ತಿದ್ದರು.

ಕೆ.ಜಿ. ತಿಮ್ಮೇಗೌಡರು, ಲಿಂಗೇಗೌಡರಿಗೆ ಕರಿಯಪ್ಪನವರ ಬಗ್ಗೆ ವಿರೋಧವಾಗಿ ಹೇಳಿದರೆ

ಅವರು ಆಜನ್ಮ ಬ್ರಹ್ಮಚಾರಿ, ಪಾದ್ರಿ, ಅವರ ಬಗ್ಗೆ ಮಾತನಾಡಬಾರದು. ಅವರು ಬ್ರಾಹ್ಮಣರಿಗಿಂತ ಬುದ್ಧಿವಂತರು ಎಂದು ಹೇಳುತ್ತಿದ್ದರು. ಎಂ. ಲಿಂಗೇಗೌಡರಿಗೂ ಕರಿಯಪ್ಪನವರಿಗೂ ರಾಜಕೀಯ ವೈರತ್ವವಿತ್ತೇ ವಿನಃ ವೈಯಕ್ತಿಕ ವೈರತ್ವ ಇರಲಿಲ್ಲ. ಉದ್ದೇಶ ಪೂರಕವಾಗಿ ಯಾರನ್ನೂ ದೂರ ಮಾಡಿದವರಲ್ಲ ಎಲ್ಲರನ್ನೂ ಆತ್ಮೀಯವಾಗಿ ಕಾಣುತ್ತಿದ್ದರು. ರಾಜಕೀಯವಾಗಿ ಬ್ರಾಹ್ಮಣ, ಲಿಂಗಾಯಿತ, ಮುಸಲ್ಮಾನ, ವಿಶ್ವಕರ್ಮ, ಪ್ರತಿ ಪಂಗಡದವರನ್ನು ಲೀಲಾಜಾಲವಾಗಿ ತಮ್ಮ ಪರ ಮಾಡಿಕೊಂಡು ಪುರಸಭಾ ಚುನಾವಣೆಯಲ್ಲಿ ಗೆಲ್ಲುತ್ತಿದ್ದರು. ಎಲ್ಲಾ ಪಂಗಡದವರು ಅವರ ಹತ್ತಿರ ಸೇರಿಕೊಳ್ಳುವಾಗ ಅನುಯಾಯಿಗಳು ಸೇರಿಕೊಂಡ ಮೇಲೆ ಗೌಡರ ಆರಾಧಕರಾಗುತ್ತಿದ್ದರು. ಸ್ವಜನ ಪಕ್ಷಪಾತ ಇರಲಿಲ್ಲ. ಗೌಡರು ಬಡತನದಲ್ಲಿಯೇ ಜೀವನ ನಡೆಸಿದರು.

13. ಗೌಡರು ಶಾಸನ ಸಭಾ ಸದಸ್ಯರಾಗಿದ್ದಾಗ ರೂಪಿಸಿದ ಸಾರಿಗೆ ವ್ಯವಸ್ಥೆ.

ಕನಕಪುರ ತಾಲ್ಲೂಕಿನ ಜನತೆ ತಾಲ್ಲೂಕು ಕಛೇರಿಗಳಿಗೆ ಮತ್ತು ರೋಗಪೀಡಿತರು ಆಸ್ಪತ್ರೆಗಳಿಗೆ ಹೋಗಿ ಬರಲು ಈಗಿನಂತೆ ಆಗ ಸಾರಿಗೆ ಸಂಪರ್ಕವಿರಲಿಲ್ಲ. ಕಾಲು ನಡಿಗೆಯಲ್ಲೇ ಕಛೇರಿಗಳಿಗೆ ಹೋಗಿ ಬರಬೇಕಾಗಿತ್ತು. ರೋಗಿಗಳು ಎತ್ತಿನ ಗಾಡಿಯಲ್ಲಿ ಅಥವಾ ಬೊಂಬು ಮರದ ಬಡಿಗೆಗಳಿಗೆ ಕಟ್ಟಿದ ಬಟ್ಟೆಯ ಜೋಳಿಗೆಗಳಲ್ಲಿ ರೋಗಿಯನ್ನು ಮಲಗಿಸಿ ಇಬ್ಬರು ಪುರುಷರು ಆಸ್ಪತ್ರೆಗೆ ತಂದು ಚಿಕಿತ್ಸೆ ಕೊಡಿಸಿ ಕರೆದೊಯ್ಯುತ್ತಿದ್ದರು. ಬಹಳ ದೂರ ಪ್ರಯಾಣ ಮಾಡಬೇಕಾದುದ್ದರಿಂದ ಕೆಲವೊಮ್ಮೆ ಸಾವನ್ನಪ್ಪುತ್ತಿದ್ದ ಸಂದರ್ಭವು ಉಂಟಾಗುತ್ತಿತ್ತು. ಇದನ್ನು ಮನಗಂಡ ಗೌಡರು ತಾಲ್ಲೂಕಿನ ಜನತೆಗೆ ಇಂತಹ ಕಷ್ಟಗಳನ್ನು ತಪ್ಪಿಸಲು ಪಟ್ಟಣದ ಕೆಲವು ಅನುಕೂಲಸ್ಥ ಮುಖಂಡರನ್ನು ಸಂಪರ್ಕಿಸಿ ಸಾರಿಗೆ ವ್ಯವಸ್ಥೆಯ ಯೋಜನೆಯನ್ನು ರೂಪಿಸಿದರು. ಈ ಯೋಜನೆಗೆ ಸ್ಪಂದಿಸಿದವರಲ್ಲಿ ಕನಕಪುರದ ಎಸ್.ಎಲ್. ನಾರಾಯಣರಾಯರು, ಪೇಟೆ ಬೀದಿ ಷರೀಪ್ ಸಾಹೇಬರು, ಕೆ.ಎನ್. ಶ್ರೀಕಂಠಯ್ಯನವರು ಬೂದಿಕೇರಿ ತಾಯಪ್ಪನವರು, ಉಯ್ಯಂಬಳ್ಳಿ ಹೋಬಳಿ ಮರೀಗೌಡರ ದೊಡ್ಡಿ ಪಟೇಲ್ ಮರಿ ಲಿಂಗೇಗೌಡರು ಮುಖ್ಯರಾಗಿದ್ದರು.

ಗೌಡರು ಸಾಲ ಪಡೆದ ಹಣದಿಂದ 'ಧನಲಕ್ಷ್ಮಿ' ಹೆಸರಿನ ಮೋಟಾರನ್ನು ಕೊಂಡು ಕನಕಪುರದಿಂದ ಸಾತನುರು, ದೊಡ್ಡ ಆಲಹಳ್ಳಿ ಮಾರ್ಗವಾಗಿ ಮುಳ್ಳಹಳ್ಳಿಗೆ ಹೋಗಿ ರಾತ್ರೀಲಿ ತಂಗಿದ್ದು ಬೆಳಿಗಿನ ಜಾವ 6:00 ಘಂಟೆಗೆ ಮುಳ್ಳಹಳ್ಳಿಯನ್ನು ಬಿಟ್ಟು ಕನಕಪುರಕ್ಕೆ ತಲುಪುತ್ತಿತ್ತು. ಈ ಮೋಟಾರಿನಲ್ಲಿ ಕಛೇರಿಗೆ ಬರುವ ಜನರು, ವ್ಯಾಪಾರಸ್ಥರು, ರೋಗಿಗಳು ಜೊತೆಗೆ ಶಾಲೆಗೆ ಬರುತ್ತಿದ್ದ ವಿದ್ಯಾರ್ಥಿಗಳು ಕಡಿಮೆ ದರದಲ್ಲಿ ಪ್ರಯಾಣಿಸುತ್ತಿದ್ದರು. ಪ್ರಯಾಣಿಸುತ್ತಿದ್ದ ವಿದ್ಯಾರ್ಥಿಗಳಲ್ಲಿ ನಾನು ಒಬ್ಬನಾಗಿದ್ದೆ. (ಈ ಕೃತಿಯ ರಚನೆಯಾಗಿರುವ ಶ್ರೀಯುತ ಚಿಕ್ಕಮರೀಗೌಡರು).

ದೇವರ ಶಿವನಹಳ್ಳಿಯಿಂದ ಸರಕಾರಿ ಬಾಲಕರ ಮಾಧ್ಯಮಿಕ ಶಾಲೆಗೆ ಇದೇ ಮೋಟಾರಿನಲ್ಲಿ ಉಚಿತವಾಗಿ ಪ್ರಯಾಣಿಸಲು ಗೌಡರು ವ್ಯವಸ್ಥೆ ಮಾಡಿಕೊಟ್ಟಿದ್ದರು.

ಇದೇ ರೀತಿ ಶರೀಫ್ ಸಾಹೇಬರು ಒಂದು ಮೋಟಾರನ್ನು ಕೊಂಡು 'ವರ್ತಕರ' ಸಂಘದ ಹೆಸರಿನಲ್ಲಿ ಕನಕಪುರ ಮತ್ತು ಬೆಂಗಳೂರಿಗೆ ಹೋಗಿ ಬರುವ ವ್ಯವಸ್ಥೆ ಮಾಡಿದರು. ಇದರಿಂದ ವರ್ತಕರು, ಸಾರ್ವಜನಿಕರು, ರೋಗಿಗಳು ಬೆಂಗಳೂರಿಗೆ ಹೋಗಿ ಬರಲು ಅನುಕೂಲವಾಗಿತ್ತು.

ಕೆ.ಎನ್. ಶ್ರೀಕಂಠಯ್ಯನವರು 'ಕೆ.ಎನ್.ಎಸ್' ಹೆಸರಿನಲ್ಲಿ ಮೋಟಾರನ್ನು ಕೊಂಡು ಕನಕಪುರದಿಂದ ಕೋಡಿಹಳ್ಳಿ, ಹೂಕುಂದ ಮಾರ್ಗವಾಗಿ ಮುಳ್ಳಹಳ್ಳಿಗೆ ಹೋಗಿ ವಾಸ್ತವ್ಯ ಹೂಡಿ ಬೆಳಗಿನ ಜಾವ ಕನಕಪುರಕ್ಕೆ ಬರುತ್ತಿತ್ತು. ಈ ಮಧ್ಯೆ ತೊರೆಬೇಕುಪ್ಪೆ ಹಳ್ಳಿಯ ಪಕ್ಕದಲ್ಲಿ ಹರಿದು ಸಂಗಮಕ್ಕೆ ಹೋಗುತ್ತಿದ್ದ ಅರ್ಕಾವತಿ ಹೊಳೆಯನ್ನು ದಾಟಬೇಕಾಗಿತ್ತು. ಆಗ ಬೇಕುಪ್ಪೆಯ ಹೊಳೆಯ ದಕ್ಷಿಣ ಭಾಗದಲ್ಲಿ ಇಳಿದು ಹೊಳೆಯನ್ನು ದಾಟಿ ಹೊಳೆಯ ಉತ್ತರ ಭಾಗದಲ್ಲಿ ಬಂದು ನಿಲ್ಲುತ್ತಿದ್ದ ಮತ್ತೊಂದು ಕೆ.ಎನ್.ಎಸ್. ಮೋಟಾರನ್ನು ಹತ್ತಿ ಕನಕಪುರಕ್ಕೆ ಪ್ರಯಾಣಿಸುತ್ತಿದ್ದರು. ಹೊಳೆಯಲ್ಲಿ ಪ್ರವಾಹವಿದ್ದಾಗ ಹರಿಗೋಲಿನಲ್ಲಿ, ನೀರು ಕಡಿಮೆಯಿದ್ದಾಗ ಜನರು ದಕ್ಷಿಣದಿಂದ ಉತ್ತರದ ದಡಕ್ಕೆ ಉತ್ತರದಿಂದ ದಕ್ಷಿಣ ದಡಕ್ಕೆ ನೀರಿನಲ್ಲೇ ನಡೆದುಕೊಂಡು ಹೋಗಿ ಬರುತ್ತಿದ್ದರು.

ಬೂದಿಕೇರಿ ತಾಯಪ್ಪನವರು ಒಂದು ಮೋಟಾರನ್ನು ಕೊಂಡು 'ಜಯಲಕ್ಷ್ಮಿ' ಎಂಬ ಹೆಸರಿನಲ್ಲಿ ಕನಕಪುರದಿಂದ ರಾಮನಗರ ಮಾರ್ಗವಾಗಿ ಮಾಗಡಿಗೆ ಸಂಚರಿಸುವ ವ್ಯವಸ್ಥೆ ಮಾಡಿದ್ದರು. ಇವರ ಮೋಟಾರಿನಲ್ಲಿಯೂ ವರ್ತಕರು ರೋಗಿಗಳು, ವಿದ್ಯಾರ್ಥಿಗಳು ಸರ್ಕಾರಿ ನೌಕರರು ಸಾರ್ವಜನಿಕರು ಸಂಚರಿಸುತ್ತಿದ್ದರು.

ಎಸ್.ಎಲ್. ನಾರಾಯಣರಾಯರು ಮೋಟಾರನ್ನು ಕೊಂಡು 'ಎಸ್.ಎಲ್.ಎನ್.ಸೇವೆ' ಎಂಬ ಹೆಸರಿನಲ್ಲಿ ಕನಕಪುರದಿಂದ ರಾಮನಗರ ಮಾರ್ಗವಾಗಿ ಮಾಗಡಿಗೆ ಸಂಚರಿಸುವಂತೆ ವ್ಯವಸ್ಥೆ ಮಾಡಿದ್ದರು. ಈ ಮೋಟಾರಿನಲ್ಲಿಯೂ ಸಾರ್ವಜನಿಕರು, ವರ್ತಕರು, ರೋಗಿಗಳು, ವಿದ್ಯಾರ್ಥಿಗಳು ನೌಕರರ ಪ್ರಯಾಣಕ್ಕೆ ವ್ಯವಸ್ಥೆ ಮಾಡಿದ್ದರು. ಆಗ ರಾಮನಗರದಲ್ಲಿದ್ದ ನ್ಯಾಯಾಲಯಕ್ಕೆ ಕಕ್ಷೀದಾರರು ಹೋಗಿಬರಲು ಅನುಕೂಲವಾಗುತ್ತಿತ್ತು.

ಮರೀಗೌಡನದೊಡ್ಡಿ ಪಟೇಲ್ ಮರಿ ಲಿಂಗೇಗೌಡರು ಮೋಟಾರನ್ನು ಕೊಂಡು 'ವಿಜಯ ಮೋಟಾರ್ ಸೇವೆ' ಎಂಬ ಹೆಸರಿನಲ್ಲಿ ಕನಕಪುರದಿಂದ ಸಾತನೂರಿಗೆ ಜನರು ಹೋಗಿ ಬರಲು ವ್ಯವಸ್ಥೆ ಮಾಡಿದ್ದರು. ಆದರೆ ಕೆಲವೇ ತಿಂಗಳುಗಳಲ್ಲಿ ಮೋಟಾರಿನ ಸಾಧಕ – ಬಾಧಕಗಳನ್ನು ನಿಭಾಯಿಸಲು ಸಾಧ್ಯವಾಗದೆ ಆ ಮೋಟಾರಿನ ಸೇವೆಯನ್ನು ಸ್ಥಗಿತಗೊಳಿಸಿದರು. ಕಾರಣ ಆ ಮೋಟಾರು ಸಾತನೂರಿಗೆ ಹೋಗಿ ಬರುತ್ತಿದ್ದಾಗ ಕಾಳೇಗೌಡನ ದೊಡ್ಡಿ ಬಳಿಯಲ್ಲಿ ದುರ್ಘಟನೆ ನಡೆದಿದ್ದೆ ಆಗಿತ್ತು.

ಮೇಲ್ಕಂಡ ಎಲ್ಲಾ ಮಹನೀಯರ ಗುರಿಯು ಜನಸೇವೆ ಮಾಡುವುದೇ ಆಗಿತ್ತು. ಹಣ ಗಳಿಕೆಯ ಉದ್ದೇಶವಾಗಿರಲಿಲ್ಲ.

14. ಕೌಟುಂಬಿಕ ಜವಾಬ್ದಾರಿ, ಹೆಣ್ಣು ಮಕ್ಕಳು, ತಮ್ಮಂದಿರು ಮತ್ತು ಗೌಡರ ಮಕ್ಕಳು ಮದುವೆ ಪ್ರಸ್ತಾಪ.

ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳ ಮದುವೆ

ವರನ ಸ್ವಗೃಹದಲ್ಲಿ ನಡೆಯುತ್ತಿತ್ತು. ಅಲ್ಲಿಗೆ ವಧುವನ್ನು ಕರೆದುಕೊಂಡು ಹೋಗಿ ಲಗ್ನ ಮಾಡುತ್ತಿದ್ದರು. ಆ ಮದುವೆಗೆ ರಕ್ತ ಸಂಬಂಧಿಗಳು, ಹಿತೈಷಿಗಳು ನಿಯಮಿತ ಸಂಖ್ಯೆಯಲ್ಲಿ ಆಪ್ತರು ಮತ್ತು ಗಣ್ಯರನ್ನು ಆಹ್ವಾನಿಸುತ್ತಿದ್ದರು. ವಧು ಮತ್ತು ವರ ಎರಡು ಕಡೆಯಿಂದಲೂ ಅಂದಾಜು ಐದುನೂರು ಮಂದಿ ನೆರೆಯುತ್ತಿರಲಿಲ್ಲ. ಕಾರಣ ಆಗಿನ ಜನಸಂಖ್ಯೆ ಅಲ್ಪ ಪ್ರಮಾಣದಾಗಿತ್ತು. ಎರಡು ಕಡೆಯ ಸಂಬಂಧಿಗಳು ಮದುವೆಗೆ ಆಗಮಿಸಲು ಈಗಿನಂತೆ ಯಾವುದೆ ಇಂಧನ ವಾಹನಗಳು ಇರಲಿಲ್ಲ. ಶ್ರೀಮಂತರು ಎತ್ತಿನ ಗಾಡಿ ಮತ್ತು ಕುದುರೆಗಳ ಮೇಲೆ ಆಗಮಿಸುತ್ತಿದ್ದರು.

ಎಂ. ಲಿಂಗೇಗೌಡರ ತಂದೆ ಶ್ರೀ ಚಿಕ್ಕನಾಗೇಗೌಡರು, ತಾಯಿ ಶ್ರೀಮತಿ ಕೆಂಪಮ್ಮನವರು, ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು, ಆರು ಮಂದಿ ಹೆಣ್ಣು ಮಕ್ಕಳು, ಒಟ್ಟು ಒಂಭತ್ತು ಮಂದಿ ಸಕುಟುಂಬ ಪರಿವಾರವಾಗಿತ್ತು. ಒಂಭತ್ತು ಮಂದಿ ಮಕ್ಕಳಲ್ಲಿ ಶ್ರೀಯುತ ಎಂ. ಲಿಂಗೇಗೌಡರು ಹಿರಿಯ ಮಗ, ಎರಡನೆಯ ಮಗ ಶ್ರೀ ಮಂಚೇಗೌಡರು, ಮೂರನೆಯ ಮಗ ಶ್ರೀ ಎಂ.ಸಿ. ನಾಗೇಶ್‌ರವರು, ಹೆಣ್ಣು ಮಕ್ಕಳಲ್ಲಿ ಶ್ರೀಮತಿ ದೊಡ್ಡಮ್ಮ, ಶ್ರೀಮತಿ ಕೆಂಪಮ್ಮ, ಶ್ರೀಮತಿ ಚೆನ್ನಮ್ಮ, ಶ್ರೀಮತಿ ದೇವಮ್ಮ, ಶ್ರೀಮತಿ ನಾಗಮ್ಮ ಮತ್ತು ಶ್ರೀಮತಿ ನಿಂಗಮ್ಮ ಈ ಆರು ಹೆಣ್ಣು ಮಕ್ಕಳು ಶ್ರೀ ಚಿಕ್ಕನಾಗೇಗೌಡರು ಮತ್ತು ಶ್ರೀಮತಿ ಕೆಂಪಮ್ಮನವರ ಸುಪುತ್ರಿಯರಾಗಿದ್ದರು.

ಗೌಡರು ಮನೆಯ ಹಿರಿಯ ಮಗನಾಗಿದ್ದುದರಿಂದ ಕೌಟುಂಬಿಕ ಜವಾಬ್ದಾರಿಯು ಅವರಿಗಿದ್ದು ಆರು ಜನ ತಂಗಿಯರು ಮತ್ತು ಇಬ್ಬರು ಸಹೋದರರ ಮದುವೆ ಮಾಡುವ ಜವಾಬ್ದಾರಿ ಅರಿಗಿದ್ದು ತಂಗಿಯರಾದ ದೊಡ್ಡಮ್ಮ ಎಂಬುವವರನ್ನು ಕನಕಪುರ ತಾಲ್ಲೂಕು, ಸಾತನೂರು ಹೋಬಳಿ ದೇವೀರಳ್ಳಿ ಕೆಂಪಮ್ಮ ಎಂಬುವವರನ್ನು ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ಹಲಗೂರಿನ ದೊಡ್ಡಗೌಡರಿಗೂ ಗ್ರಾಮದ ಪುಟ್ಟೇಗೌಡರಿಗೂ, ಚನ್ನಮ್ಮ ಎಂಬುವವರನ್ನು ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಗೌಡಹಳ್ಳಿ ಗ್ರಾಮದ ಶಿವನೇಗೌಡರಿಗು, ದೇವಮ್ಮ ಎಂಬುವವರನ್ನು ಇದೇ ತಾಲ್ಲೂಕು ಕಸಬಾ ಹೋಬಳಿ, ಚಾಕನಹಳ್ಳಿ ಗ್ರಾಮದ ಚಿಕ್ಕಪುಟ್ಟೇಗೌಡರಿಗೂ, ನಾಗಮ್ಮ ಎಂಬುವವರನ್ನು ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಳ್ಳಿ ಗ್ರಾಮದ ಕಾಳವರದೇಗೌಡರಿಗೂ ನಿಂಗಮ್ಮ ಎಂಬುವವರನ್ನು, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ ಕಣಿವೆ ವಿರುಪಸಂದ್ರದ ದ್ಯಾವರಸೇಗೌಡರಿಗೂ ಕೊಟ್ಟು ಲಗ್ನ ಮಾಡಿದ್ದರು. ಮೂರನೇ ತಂಗಿ ದೇವಮ್ಮ ಎಂಬುವವರನ್ನು ಎಸ್. ಕರಿಯಪ್ಪನವರಿಗೆ ಲಗ್ನ ಮಾಡಿಕೊಡುವ ಉದ್ದೇಶವಿದ್ದು, ಕಾರಣಾಂತರದಿಂದ ಅದು ರದ್ದಾಯಿತು.

ಈಗಿನಂತೆ ಹಿಂದಿನ ಕಾಲದಲ್ಲಿ ವರದಕ್ಷಿಣೆಯಿರಲಿಲ್ಲ. ವರೋಪಚಾರವಿತ್ತು. ವರೋಪಚಾರಕ್ಕೆ ವರನಿಗೆ ವಸ್ತ್ರ, ಛತ್ರಿ, ಪಾದರಕ್ಷೆ ಇವುಗಳ ಜೊತೆಗೆ ಅವರವರ ದಕ್ಷತೆಯಂತೆ ತಟ್ಟೆ – ಚಂಬುಗಳನ್ನು ಅರ್ಪಿಸಿ ವರನಿಗೆ ಪಾದಪೂಜೆ ಮಾಡಿ ಮದುವೆ ಮಂಟಪಕ್ಕೆ ಕರೆದೊಯ್ದು ಮಗಳನ್ನು ಕನ್ಯಾದಾನ ಮಾಡಿಕೊಡುತ್ತಿದ್ದರು. ಅವರವರ ದಕ್ಷತೆಯಿಂದ ವರನಿಗೆ ಏನಾದರೊಂದು ಚಿನ್ನದ ಒಡವೆಯನ್ನು ಕೊಡುತ್ತಿದ್ದರು. ವರನ ಕಡೆಯವರು ಅವರ ದಕ್ಷತೆಯಂತೆ ಓಲೆ, ತಾಳಿ,

ಕಾಲುಂಗರದ ಜೊತೆಗೆ ಚಿನ್ನದ ಒಡವೆಗಳನ್ನು ಕೊಡುತ್ತಿದ್ದರು. ಮದುವೆ ಕಾರ್ಯ ಮುಗಿದ ಮೇಲೆ ವಧುವಿನ ಮನೆಯಲ್ಲಿ ಬೀಗರೌತಣ ಏರ್ಪಾಟಾಗುತ್ತಿತ್ತು. ಈ ಔತಣಕ್ಕೆ ವಧುವಿನ ಕಡೆಯವರು, ವರನ ಸಂಬಂಧಿಕರು ಮತ್ತು ಉರಿನವರನೆಲ್ಲಾ ಕರೆದು ಊಟ ಹಾಕಿ ಉಪಚರಿಸುತ್ತಿದ್ದರು. ಗೌಡರು ತಮ್ಮ ಎಲ್ಲಾ ತಂಗಿಯರ ನೆರವಿಗಳನ್ನು (ಬೀಗರ ಔತಣ) ತಮ್ಮ ಮನೆಯಲ್ಲೇ ಊರಿನ ಜನರ ಸಹಕಾರದಿಂದ ಸಂಭ್ರಮದಿಂದ ಏರ್ಪಡಿಸುತ್ತಿದ್ದರು.

ಮೊದಲನೇ ತಮ್ಮನಾದ ಮಂಚೇಗೌಡರಿಗೆ ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಬೂದಿಗುಪ್ಪೆ ಗ್ರಾಮದ ಪಂಡಿತ ಪಂಚೇಗೌಡರ ಮಗಳು ಕೆಂಪಮ್ಮ ಎಂಬುವವರನ್ನು ತಂದು ಸಂಭ್ರಮದಿಂದ ಲಗ್ನ ಮಾಡಿದ್ದರು.

ಎರಡನೆಯ ತಮ್ಮ ಎಂ.ಸಿ. ನಾಗೇಶ್‌ರವರಿಗೆ ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಬರಡನಹಳ್ಳಿ ಗ್ರಾಮದ ಪಟೇಲ್ ಭೈರೇಗೌಡರ ಮಗಳು ಸರೋಜಮ್ಮ ಎಂಬ ವಧುವನ್ನು ತಂದು ಊರ ತುಂಬೆಲ್ಲಾ ತೆಂಗು ಮತ್ತು ಮಾವಿನ ಸೊಪ್ಪುಗಳಿಂದ ಚಪ್ಪರ ಹಾಕಿಸಿ ಸಂಭ್ರಮದಿಂದ ಮದುವೆ ಮಾಡಿದರು.

ಈ ಶುಭಕಾರ್ಯಕ್ಕೆ ಆಗಿನ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಮತ್ತು ಕೇಂದ್ರ ಸರ್ಕಾರದ ಉಪರಾಷ್ಟ್ರಪತಿಯಾಗಿದ್ದ ಶ್ರೀ ಬಿ.ಡಿ. ಜತ್ತಿಯವರು ಆಗಮಿಸಿ ಶುಭ ಕೋರಿದ್ದರು. ಈ ಗಣ್ಯರನ್ನು ಪೂಜ್ಯ ಶ್ರೀ ಎಸ್. ಕರಿಯಪ್ಪನವರು ಸ್ವಾಗತಿಸಿದರು. ಅಂದಿನ ದಿನದೊಂದು ಸಂಜೆ ನಡೆದ ಆರತಕ್ಷತೆ ಕಾರ್ಯಕ್ರಮದಲ್ಲಿ ಕೃತಿಯ ಲೇಖಕರಾದ ಚಿಕ್ಕಮರೀಗೌಡರು ಸುಗಮ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ದಿನ ಕಳೆದಂತೆ ಎಂ.ಸಿ. ನಾಗೇಶ್‌ರವರಿಗೆ ಐದು ಮಕ್ಕಳಾಗಿದ್ದು ಅವರಿಗೆ ಪಾಠ ಹೇಳಿಕೊಟ್ಟ ಸಂತೃಪ್ತಿ ಲೇಖಕರಿಗೆ ಇದೆ.

ಅಂದು ಎಂ.ಸಿ. ನಾಗೇಶ್‌ರವರ ಮದುವೆಗೆ ಗೌಡರ ಆಹ್ವಾನದ ಮೇರೆಗೆ ಕೆಂಗಲ್ ಹನುಮಂತಯ್ಯನವರು ಮತ್ತು ಬಿ.ಡಿ. ಜತ್ತಿಯವರು ಆಗಮಿಸಿದ್ದು ಮಳಗಾಳಿಗೆ ಹೋಗಲು ಕಾಲುನಡಿಗೆಯಲ್ಲೇ ಹೊಳೆಯನ್ನು ದಾಟಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಮಂತ್ರಿ ಮಹೋದಯರು ನಿಮ್ಮ ಊರಿಗೆ ಹೋಗಿ ಬರುವ ಜನರಿಗೆ, ಹೊಳೆ ತುಂಬಿ ಹರಿದಾಗ ತೊಂದರೆಯಾಗುವುದಿಲ್ಲವೇ ಎಂದು ಗೌಡರನ್ನು ಪ್ರಶ್ನಿಸಿದಾಗ ಗೌಡರು, ಸ್ವಾಮಿ ಹಿಂದಿನ ಮಂತ್ರಿ ಮಹೋದಯರು ಮಳಗಾಳು ಸೇತುವೆಗೆ ಮಂಜೂರಾತಿ ನೀಡಿದ್ದರು'. ಆದರೂ ಅದು ಕಾರ್ಯಗತವಾಗದೆ ವಿಳಂಬವಾಗಿದೆ. ತಮ್ಮ ಆಡಳಿತಾವಧಿಯಲ್ಲಿ ಸರ್ಕಾರದ ಅನುದಾನವನ್ನು ಮಂಜೂರು ಮಾಡಿಕೊಟ್ಟು ಸೇತುವೆ ಕಟ್ಟಲು ಸಹಾಯ ಮಾಡಿಕೊಡಬೇಕೆಂದು ಕೋರಿದರು. ಅದಕ್ಕೆ ಮಂತ್ರಿ ಮಹೋದಯರು ಸಮ್ಮತಿಸಿದ್ದರು. ಆದರೂ ಅದು ಕಾರ್ಯಗತವಾಗಲಿಲ್ಲ. ಸೇತುವೆ ಕಟ್ಟುವ ಕಾರ್ಯ ಬಹಳ ದಿನಗಳವರೆಗೆ ಮುಂದೂಡಿ ನಂತರ ಅದು ನೆರವೇರಿತು.

ತಮ್ಮಂದಿರ ಮದುವೆಯಾದ ನಂತರ ಗೌಡರ ಮೊದಲನೆಯ ಮಗಳಾದ ಎಂ.ಎಲ್. ಯಶೋದಮ್ಮ ಎಂಬ ವಧುವನ್ನು ಮಂಡ್ಯ ಜಿಲ್ಲೆ

ಮಳವಳ್ಳಿ ತಾಲ್ಲೂಕು ಹಲಗೂರಿನ ಡಿ. ಮಂಚೇಗೌಡರಿಗೆ ಕೊಟ್ಟು ಕನಕಪುರದಲ್ಲಿ ಮದುವೆ ಮಾಡಿದ್ದರು. ಈ ಶುಭ ಕಾರ್ಯಕ್ಕೆ ಆಗಿನ ಮುಖ್ಯಮಂತ್ರಿಯಾಗಿದ್ದ ಬಿ.ಡಿ. ಜತ್ತಿಯವರು, ನೀರಾವರಿ ಮಂತ್ರಿಯಾಗಿದ್ದ ಹೆಚ್.ಎಂ. ಚೆನ್ನಬಸಪ್ಪನವರು, ಸಾರ್ವಜನಿಕ ಕೆಲಸ ಕಾರ್ಯ ಇಲಾಖೆಯ ಮಂತ್ರಿಯವರಾಗಿದ್ದ ಸನ್ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು ಬಂದಿದ್ದಾಗ ಕಾಲು ನಡಿಗೆಯಲ್ಲಿ ಅರ್ಕಾವತಿ ಹೊಳೆಯನ್ನು ದಾಟಿ ಮಳಗಾಳಿಗೆ ಹೋಗಬೇಕಾದ ಸಂದರ್ಭದಲ್ಲಿ ಮಂತ್ರಿಯವರು ಸುತ್ತಲಹಳ್ಳಿ ಮತ್ತು ಪಟ್ಟಣದ ಜನರು ಹೊಳೆ ತುಂಬಿ ಹರಿದಾಗ ಮಳಗಾಳಿಗೆ ಬರಲು ತೊಂದರೆಯಾಗುವುದಿಲ್ಲವೆ ಎಂದು ಕೇಳಿದಾಗ, ಗೌಡರು ಪೂರ್ವದ ಕಡೆ ಇರುವ ಮೂವತ್ತು ಗ್ರಾಮಗಳಿಂದ ಬರುವ ಜನರಿಗೆಲ್ಲಾ ಇದೇ ಕಷ್ಟವಾಗುತ್ತಿದೆ. ತಾವು ಕೃಪೆ ಮಾಡಿ ಮಳಗಾಳಿಗೆ ಬರುವ ಜನರಿಗೆ ಸೇತುವೆ ಕಟ್ಟಲು 'ಮಂಜೂರು ಮಾಡಿಕೊಡಿ ಸ್ವಾಮಿ' ಎಂದು ಕೇಳಿದರು. ಗೌಡರ ಮಾತಿಗೆ ಮಂತ್ರಿ ಮಹೋದಯರು ಸಮ್ಮತಿಸಿದರು. ಮಂಜೂರು ಆಯಿತು, ಆದರೆ ತುರ್ತಾಗಿ ಕಾರ್ಯ ನಡೆಯಲಿಲ್ಲ. ಹತ್ತಾರು ವರ್ಷಗಳೇ ಕಳೆದು ಹೋಯಿತು. ಅನಂತರ 'ದೇವರಾಜು ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಕರಿಯಪ್ಪನವರ ಪ್ರಯತ್ನದಿಂದ ಸೇತುವೆ ಪೂರ್ಣಗೊಂಡಿತು.

ನಂತರ ಗೌಡರ ಹಿರಿಯ ಮಗ ಎಂ.ಎಲ್. ನಾಗರಜುರವರಿಗೆ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ದೇಸಹಳ್ಳಿ ಗ್ರಾಮದ ಶಿವರಾಮೇಗೌಡರ ಮಗಳಾದ ಪಾರ್ವತಮ್ಮ ಎಂಬ ವಧುವನ್ನು ತಂದು ಬೆಂಗಳೂರು ಸಜ್ಜನರಾವ್ ಸರ್ಕಲ್ ಶ್ರೀ ಸತ್ಯನಾರಾಯಣ ಛತ್ರದಲ್ಲಿ ಸಂಭ್ರಮದಿಂದ ಮದುವೆ ಮಾಡಿದರು.

ಇವರ ಎರಡನೆಯ ಮಗನಾದ ಎಂ.ಎಲ್. ಶ್ರೀಕಂಠು ಎಂಬುವವರು ಮಾರಿಕಾ (ಕಾಲರಾ) ರೋಗದಿಂದ ನಿಧನರಾಗಿದ್ದರು.

ಗೌಡರು ಅಂತಿಮವಾದ ಮೇಲೆ ಅವರ ಹಿರಿಯ ಮಗ ಎಂ.ಎಲ್. ನಾಗರಾಜುರವರು ಎರಡನೇ ತಮ್ಮನವರಾದ ಎಂ.ಎಲ್. ರಮೇಶ್‌ರವರಿಗೆ ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ತಿಟ್ಟಮಾರನಹಳ್ಳಿಯ ವಿದ್ಯಾಮಂತ್ರಿಗಳಾಗಿದ್ದ ಶ್ರೀ ವೆಂಕಟಪ್ಪನವರ ಮೊಮ್ಮಗಳಾದ ಕೌಸಲ್ಯ ಎಂಬ ವಧುವನ್ನು ತಂದು ಬೆಂಗಳೂರಿನಲ್ಲಿ ಸಂಭ್ರಮದಿಂದ ಮದುವೆ ಮಾಡಿಸಿದರು.

ಎರಡನೇ ತಂಗಿಯವರಾದ ಎಂ.ಎಲ್. ಹಂಸವತಿಯವರನ್ನು ಅವರ ಅಣ್ಣನವರಾದ ಎಂ.ಎಲ್. ನಾಗರಾಜುರವರು, ಬೆಂಗಳೂರು ಜಿಲ್ಲೆ, ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಗೇರಳ್ಳಿ ಗ್ರಾಮದ ಭೀಮೇಗೌಡರಿಗೆ ಕೊಟ್ಟು ಬೆಂಗಳೂರಿನಲ್ಲಿ ಮದುವೆ ಮಾಡಿಸಿದರು.

ಮೂರನೆಯ ತಮ್ಮನವರಾದ ಎಂ.ಎಲ್. ಹೇಮಚಂದ್ರರವರಿಗೆ ಅವರ ಅಣ್ಣಂದಿರಾದ ಎಂ.ಎಲ್. ರಮೇಶ್‌ರವರು, ಬೆಂಗಳೂರು ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು ಸುಂಡಘಟ್ಟದ ಗೋವಿಂದೇಗೌಡರ ಮಗಳು ಜಯಲಕ್ಷ್ಮೀ ಎಂಬ ವಧುವನ್ನು ತಂದು ಚನ್ನಪಟ್ಟಣದಲ್ಲಿ ಮದುವೆ ಮಾಡಿಸಿದರು.

ನಾಲ್ಕನೇ ತಮ್ಮನವರಾದ ಎಂ.ಎಲ್. ಕೃಷ್ಣಪ್ಪನವರಿಗೆ, ಅವರ ಅಣ್ಣಂದಿರಾದ ಎಂ.ಎಲ್.

ನಾಗರಾಜುರವರು ಮತ್ತು ಎಂ.ಎಲ್. ರಮೇಶ್‌ರವರು ಬೆಂಗಳೂರು ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕೆಂಗಲ್ಲಿನ ರಾಮೇಗೌಡರ ಮಗಳು ಶ್ಯಾಮಲ ಎಂಬ ವಧುವನ್ನು ತಂದು ಕೆಂಗಲ್ಲಿನಲ್ಲಿ ಮದುವೆ ಮಾಡಿಸಿದರು.

ಐದನೇ ತಮ್ಮನವರಾದ ಎಂ.ಎಲ್. ಶಿವಕುಮಾರ್‌ರವರಿಗೆ ಅವರ ಅಣ್ಣನವರಾದ ಎಂ.ಎಲ್. ರಮೇಶ್‌ರವರು ಬೆಂಗಳೂರು ಜಿಲ್ಲೆ (ಈಗಿನ ರಾಮನಗರ ಜಿಲ್ಲೆ) ಕನಕಪುರ ತಾಲ್ಲೂಕು, ಉಯ್ಯಂಬಹಳ್ಳಿ ಹೋಬಳಿ, ತಗಡೇಗೌಡನದೊಡ್ಡಿ, ತಗಡೇಗೌಡ ಉರುಫ್ ಸಪ್ಪೇಗೌಡರ ಮಗ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ಶಿವಣ್ಣಗೌಡರ ಮಗಳು ಭಾಗ್ಯಲಕ್ಷ್ಮೀ ಎಂಬ ವಧುವನ್ನು ತಂದು ಕನಕಪುರ ಪುರಸಭಾ ಪ್ರೌಢಶಾಲೆಯಲ್ಲಿ ಮದುವೆ ಮಾಡಿಸಿದರು.

15. ತಾಲ್ಲೂಕಿನ ಅಭಿವೃದ್ಧಿಯಲ್ಲಿ ಗೌಡರ ಪಾತ್ರ

ಗೌಡರು ಶಾಸಕರಾಗಿದ್ದಾಗ ಸುವರ್ಣಮುಖಿ ಅಣೆಕಟ್ಟನ್ನು ದಿವಾನ್ ಮಿರ್ಜಾ–ಇಸ್ಮಾಯಿಲ್‌ರವರ ಹಸ್ತದಿಂದ ಉದ್ಘಾಟನೆ ಮಾಡಿಸಿದ್ದರು. ಹಾಲಿ ಸರ್ಕಾರಿ ಹಳೇ ಆಸ್ಪತ್ರೆ ಜಾಗವನ್ನು ಬಿಜ್ಜಳ್ಳಿ ಸಾಹುಕಾರ್ ಅಣ್ಣಯ್ಯರವರಿಂದ ದಾನ ಪಡೆಯುವುದರ ಜೊತೆಗೆ ಅವರಿಂದಲೇ 10,000 ರೂಪಾಯಿ ವಂತಿಗೆ ಪಡೆದು ಆಸ್ಪತ್ರೆಯನ್ನು ಕಟ್ಟಿಸಿದರು.

ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದಾಗ ತಾಲ್ಲೂಕಿನ ಹೋಬಳಿವಾರು ಅರಣ್ಯ ಇಲಾಖೆಗಳಿಗೆ ಬಂಗ್ಲೆಗಳನ್ನು ಕಟ್ಟಿಸಿಕೊಟ್ಟರು. ಕೋಡಿಹಳ್ಳಿ, ಮರಳವಾಡಿಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿಸಿಕೊಟ್ಟರು.

ಇವರ ಕಾಲದಲ್ಲಿ ಕಟ್ಟಿಸಿದ್ದ ಕಟ್ಟಡಗಳಲ್ಲಿ ಈಗಿನ ಬುದ್ಧದೇವ ಹಾಸ್ಟೆಲ್ ಒಂದು 1956–57ರಲ್ಲಿ ಮೈಸೂರು ಶಾಸನ ಸಭಾ ಸದಸ್ಯರಾಗಿದ್ದಾಗ ಕೋಡಿಹಳ್ಳಿ ಹೋಬಳಿ, ಚಿಕ್ಕೊಂಡನಹಳ್ಳಿ ಕೆರೆ, ಹಂಚುಕುಣಿ ಕೆರೆ, ಕೋಡಿಹಳ್ಳಿ, ಸೀರೇಹಳ್ಳಕ್ಕೆ ಸೇತುವೆ ಸಹ ಕಟ್ಟಿಸಿದ್ದರು.

ಮಾರುಕಟ್ಟೆ ಸಹಕಾರಿ ಸಂಘವನ್ನು ಸ್ಥಾಪಿಸಿ ರೈತರಿಗೆ ಮತ್ತು ಸಾರ್ವಜನಿಕರಿಗೆ ಆಹಾರ ಧಾನ್ಯ ವ್ಯವಸಾಯದ ಮುಟ್ಟುಗಳು ಮತ್ತು ಸೀಮೆಎಣ್ಣೆ ಹಾಗೂ ಕಡಿಮೆ ದರದಲ್ಲಿ ಬಟ್ಟೆ ಮುಂತಾದವುಗಳು ಲಭ್ಯವಾಗುವಂತೆ ಮಾಡಿಸಿದರು. ‘ಆ ಸಮಯದಲ್ಲಿ ಗೌಡರೇ 3 (ಮೂರು) ವರ್ಷಗಳು ಮಾರುಕಟ್ಟೆ ಸಹಕಾರಿ ಸಂಘದ ಅಧ್ಯಕ್ಷರಾಗಿದ್ದರು.’ ಬಡವರು ಸಾಹುಕಾರರಿಂದ ಸಾಲ ಪಡೆದು ಬಡ್ಡಿ ಕಟ್ಟಬೇಕಾಗಿತ್ತು. ಸಾಹುಕಾರರ ಶೋಷಣೆ ತಪ್ಪಿಸಲು ಬಡವರಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯ ಮಾಡಿಸಿಕೊಟ್ಟರು.

ತಾಲ್ಲೂಕಿನಲ್ಲಿದ್ದ ಗೌಡರ ಸಮಕಾಲಿನರು ಸಾದೇನಹಳ್ಳಿ ಬೋಳೆಗೌಡರು, ಹಾರೋಹಳ್ಳಿ ಗೋಪಾಲಕೃಷ್ಣಯ್ಯನವರು, ಕೋಡಿಹಳ್ಳಿ ಟೆಂಟ್ ರಂಗೇಗೌಡರು, ಮುದುವಾಡಿ ಲಿಂಗೇಗೌಡರು, ಬಿಜ್ಜಳ್ಳಿ ಅಣ್ಣಯ್ಯನವರು, ಹುಣಸನಹಳ್ಳಿ ಬಂಗಾರಶೆಟ್ಟರು, ಕೊಳಗೊಂಡನಹಳ್ಳಿ ಹೊಂಬಾಳೆಗೌಡರು, ಕೋಡಿಹಳ್ಳಿ ತುಪಾಕಿ ವೀರಪ್ಪನವರು ಇನ್ನು ಮುಂತಾದವರು.

16. ಗೌಡರ ಕಾಲದಲ್ಲಿ ನಿರುದ್ಯೋಗ ಸಮಸ್ಯೆಗೆ ನೀಡುತ್ತಿದ್ದ ಪರಿಹಾರ

ತಾಲ್ಲೂಕಿನ ವಿದ್ಯಾವಂತ ಯುವಕರಿಗೆ ಇವರು ದಾರಿದೀಪವಾಗಿದ್ದರು. ಪ್ರತಿ ಗುರುವಾರ

ಗೋಪಿ ಹೋಟೆಲ್ ಮುಂಭಾಗದಲ್ಲಿ ಜನಸಂಪರ್ಕ ಸಭೆ ನಡೆಯುತ್ತಿತ್ತು. ಹೋಟೆಲ್ ಮುಂಭಾಗದ ಕಲ್ಲುಚಪ್ಪಡಿಯ ಮೇಲೆ ಗೌಡರು ಕುಳಿತುಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ವಿವಿಧ ಇಲಾಖೆಗಳಿಗೆ ನೌಕರಿಗಾಗಿ ಅರ್ಜಿ ಸಲ್ಲಿಸಿದ್ದ ಯುವಕರು ಗೌಡರಿಗೆ, ತಾವು ಅರ್ಜಿ ಸಲ್ಲಿಸಿರುವ ಇಲಾಖೆಗಳಲ್ಲಿ ನೌಕರರಿಗೆ ಶಿಫಾರಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ನಿರುದ್ಯೋಗಿ ಯುವಕರು ನೌಕರಿಗಾಗಿ ಅರ್ಜಿ ಸಲ್ಲಿಸಿರುವ ವಿವಿಧ ಇಲಾಖೆಗಳ ನಿರ್ದೇಶಕರಿಗೆ ಶಿಫಾರಸ್ಸು ಪತ್ರ ಬರೆದುಕೊಡುತ್ತಿದ್ದರು. ತಾವು ಮಾಡಿದ ಶಿಫಾರಸ್ಸಿನ ಫಲಿತಾಂಶ ಒಂದು ವಾರದೊಳಗೆ ಏನಾಯಿತೆಂಬುದನ್ನು ತಮಗೆ ತಿಳಿಸಬೇಕೆಂದು ಅರ್ಜಿದಾರರಿಗೆ ಹೇಳುತ್ತಿದ್ದರು. ಒಂದು ವೇಳೆ ಅವರ ಶಿಫಾರಸ್ಸು ಫಲಪ್ರದವಾಗದಿದ್ದಲ್ಲಿ ಗೌಡರೇ ನೇರವಾಗಿ ಸಂಬಂಧಪಟ್ಟ ಇಲಾಖೆಗೆ ಹೋಗಿ ಅರ್ಜಿ ಕೊಟ್ಟಿದ್ದವರೆಲ್ಲರಿಗೂ ಕೆಲಸ ಸಿಗುವಂತೆ ಮಾಡುತ್ತಿದ್ದರು. ಕೆಲವೊಮ್ಮೆ ಶಿಫಾರಸ್ಸು ಬರೆಯಲು ಕಾಗದ ಸಿಗದಿದ್ದಾಗ ಪಕ್ಕದಲೇ ಬಿದ್ದಿದ್ದ 'ಪಾಸಿಂಗ್ ಸೋ ಸಿಗರೇಟ್ ಪ್ಯಾಕಿನ ಒಳಭಾಗದ ರಟ್ಟನ್ನು ತೆಗೆದು ಅದರ ಮೇಲೆ ಕೋರಿಕೊಂಡ ಅಭ್ಯರ್ಥಿಗೆ ಶಿಫಾರಸ್ಸು ಬರೆದುಕೊಡುತ್ತಿದ್ದರು. ಒಮ್ಮೆ ಮೋಜಿಣಿ (ಸರ್ವೇ) ಇಲಾಖೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಯು ಇವರು ಶಿಫಾರಸ್ಸು ಮಾಡಿ ಬರೆದುಕೊಟ್ಟಿದ್ದ ಚೀಟಿಯನ್ನು ಮೋಜಿಣಿ ಇಲಾಖೆಯ ಮುಖ್ಯಸ್ಥರಿಗೆ ಆ ಅಭ್ಯರ್ಥಿಯು ತೆಗೆದುಕೊಂಡು ಹೋಗಿ ಕೊಟ್ಟಿದ್ದ ದಿನವೇ ಅವರ ಕೆಲಸವಾಯಿತು.

ಇದೇ ಸಂದರ್ಭದಲ್ಲಿ ತಮ್ಮ ಮಕ್ಕಳಿಗೆ ವಿದ್ಯಾರ್ಥಿವೇತನ ಕೊಡಿಸಿಕೊಡಬೇಕೆಂದು ಕೋರಿ ಅರ್ಜಿಗಳನ್ನು ಕೊಟ್ಟ ಪೋಷಕರಿಗೆ ಅವರ ಕೋರಿಕೆ ಈಡೇರಿಸುವ ಆಶ್ವಾಸನೆ ಕೊಟ್ಟು ಅದು ಕಾರ್ಯಗತವಾಗಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಿಗುವಂತಾಯಿತು. ಕಷ್ಟ ಕಾರ್ಪಣ್ಯಗಳಿಗೆ ಮದುವೆ ಕಾರ್ಯಗಳಿಗೆ ಧನ ಸಹಾಯ ಮಾಡಬೇಕೆಂದು ಬೇಡಿ ಬರುತ್ತಿದ್ದ ಬಡ ಜನರಿಗೆ ಸಹಾಯ ಮಾಡುತ್ತಿದ್ದರು. ಕೆಲವೊಮ್ಮೆ ಅತಿ ಬಡವರಾಗಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಹೋಗಬೇಕಾದ ರೋಗಿಗಳಿಗೆ ಸಾಮಾನ್ಯ ರೋಗಿಗಳಾಗಿದ್ದರೆ ಕನಕಪುರದ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಆಗಲೇಬೇಕೆಂದಿದ್ದರೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ತಮ್ಮ ಗೆಳೆಯರಲ್ಲಿ ಯಾರಾದರೊಬ್ಬರನ್ನು ಕಳುಹಿಸಿ ಸಹಾಯ ಮಾಡುತ್ತಿದ್ದರು. ಅವಶ್ಯವಿದ್ದಲ್ಲಿ ತಾವೇ ನೇರವಾಗಿ ಆಸ್ಪತ್ರೆಗಳಿಗೆ ಹೋಗಿ ರೋಗಿಗಳ ಶಿಷ್ರುಸೆಗಳಿಗೆ ಸ್ಪಂದಿಸುತ್ತಿದ್ದರು. ಗೌಡರಿಗೆ ಸಾರ್ವಜನಿಕರ ಬಗ್ಗೆ ಇರುವ ಕನಿಕರವನ್ನು ಕಂಡು ವೈದ್ಯರು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು. ಅಷ್ಟೇ ಅಲ್ಲದೆ ಗೌಡರು ಜನರ ಬಗ್ಗೆ ಇಟ್ಟಿರುವ ಕಾಳಜಿಗೆ ತಲೆದೂಗುತ್ತಿದ್ದರು.

ಸಾಮಾನ್ಯ ವ್ಯಕ್ತಿ ಬಂದು ಯಾವುದೇ ಸಹಾಯ ಕೇಳಿದರೂ ಹೆದರಬೇಡ ನಾನಿದ್ದೇನೆ ಎಂದು ಧೈರ್ಯಕೊಡುತ್ತಿದ್ದರು. ಹಾಗೆಯೇ ಸಹಾಯವನ್ನು ಮಾಡುತ್ತಿದ್ದರು. ಜನರಲ್ಲಿ ಜಗಳವಾದರೆ ಇಂಗ್ಲೀಷರ ಕಾಲವಾದರೂ ಮಧ್ಯವರ್ತಿಯಾಗಿ ಆ ಜಗಳವನ್ನು ಪರಿಹರಿಸುತ್ತಿದ್ದರು. ಇವರ ವಾಕ್‌ಚಾತುರ್ಯ, ಸಮಯ ಪ್ರಜ್ಞೆ, ತಾಳ್ಮೆ, ಸಮ್ಮೋಹನಾ ಚಾತುರ್ಯವನ್ನು ಕಂಡು ಇಂಗ್ಲೀಷರು ಸಹ ಇವರನ್ನು ಗೌರವಿಸುತ್ತಿದ್ದರು.

ಹೊಳೆಯಲ್ಲಿ ಗಾಡಿಯ ಮೇಲೆ ಭತ್ತದ ಮೂಟೆ ಸಾಗಿಸುವಾಗ ಎತ್ತುಗಳು ಎಳೆಯದೇ ಇದ್ದರೆ, ತಾವೇ ನೀರಿಗಿಳಿದು ಮೂಟೆಗಳನ್ನು ದಡಕ್ಕೆ ಸಾಗಿಸುತ್ತಿದ್ದರು. ಕೆಲವೊಮ್ಮೆ ಪುರಿಮೂಟೆ, ತರಕಾರಿ ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಲ್ಲಿ ಕಚ್ಚೆ ಮೇಲಕ್ಕೆತ್ತಿ ತುಂಬಿದ ಹೊಳೆಯಲ್ಲಿ ನಡೆದು ಬರುತ್ತಿರುವುದನ್ನು ಕಂಡು ನೋಡುಗರಿಗೆ ನಗುಬರುವಂತಾಗಿದ್ದರೂ ನಗುತ್ತಿರಲಿಲ್ಲ. ಬದಲಿಗೆ ಅವರ ಬಗ್ಗೆ ಅಭಿಮಾನ ಉಕ್ಕುತ್ತಿತ್ತು.

'ಏನಾದರೂ ಆಗು ಮೊದಲು ಮಾನವನಾಗು' ಎಂಬ ಕುವೆಂಪುರವರ ನಾಣ್ನುಡಿಯಂತೆ, ಗೌಡರು ನಿರುದ್ಯೋಗ ಸಮಸ್ಯೆಗೆ ಪರಿಹಾರ ನೀಡಿದ ಮನವತಾವಾದಿಯಾಗಿದ್ದರು.

17. ಸೇವಾ ಮನೋಭಾವ

"ಸಮಯೋಚಿತಕೈದಿದ ತೃಣವೇ ಪರ್ವತವಲ್ಲವೇ" ಎಂಬ ಸೋಮೇಶ್ವರ ಕವಿಯವಾಣಿ ಗೌಡರಿಗೆ ಅನ್ವಯಿಸುತ್ತದೆ. ಇದಕ್ಕೆ ಕಾರಣ ಬಾಲ್ಯದ ಹವ್ಯಾಸಗಳಲ್ಲಿ ಒಂದಾಗಿದ್ದ ಫುಟ್‌ಬಾಲ್ (ಕಾಲ್‌ಚೆಂಡು) ಇವರ ಸೇವಾ ಮನೋಭಾವಕ್ಕೆ ಒತ್ತುಕೊಟ್ಟಿತ್ತು. 1957ರಲ್ಲಿ ಉತ್ತರ ಪ್ರದೇಶದ ಗಂಗಾನದಿ ಪ್ರವಾಹ ಉಂಟಾಗಿ ಸಾವಿರಾರು ಜನ ಮನೆ-ಮಠಗಳು ಮತ್ತು ಪ್ರಾಣಿಗಳನ್ನು ಕಳೆದುಕೊಳ್ಳುವುದರ ಜೊತೆಗೆ ಕೆಲವಾರು ಜನ ಪ್ರಾಣ ಕಳೆದುಕೊಂಡರು. ಆ ಸಂತಸ್ಥರ ನೆರವು ನಿಧಿಗೆ ಧನ ಸಂಗ್ರಹಿಸಲು ಕನಕಪುರ ಗ್ರಾಮ ವಿದ್ಯಾ ಪ್ರಚಾರಕ ಸಂಘದ ಆಟದ ಮೈದಾನದಲ್ಲಿ ಎಸ್. ಕರಿಯಪ್ಪನವರು, ಎಂ. ಲಿಂಗೇಗೌಡರು, ಹೋಟೆಲ್ ಸುಬ್ಬಯ್ಯರವರು, ಸೈಕಲ್ ಶಾಪ್ ಮುದ್ದಪ್ಪನವರು, ಸ್ವಾತಂತ್ರ್ಯ ಹೋರಾಟಗಾರರಾದ ರಾಜಪ್ಪನವರು, ಕರುಪೇಟೆ ಪುಟ್ಟಮಾದಯ್ಯನವರು ಪುರ ಪ್ರೌಢಶಾಲೆಯಲ್ಲಿ ಹಿರಿಯ ಶಿಕ್ಷಕರಾಗಿದ್ದ ದೀಕ್ಷಿತ್‌ರವರು ಇನ್ನು ಮುಂತಾದವರೊಡನೆ ಸೇರಿ ಫುಟ್‌ಬಾಲ್ ಪಂದ್ಯಾವಳಿಯನ್ನು ಏರ್ಪಡಿಸಿ ಸಂತ್ರಸ್ಥರ ಪರಿಹಾರ ನಿಧಿಗೆ ಧನ ಸಂಗ್ರಹಿಸಿ ಪ್ರಧಾನ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದರು. ಈ ಪಂದ್ಯಾವಳಿಯಲ್ಲಿ ಎಸ್. ಕರಿಯಪ್ಪನವರು ಚೆಂಡು ಹೊಡೆಯಲು ಮಾಡಿರುವ ಎರಡು ಕಂಬಗಳ ನಡುವಿನ ಸ್ಥಾನದಲ್ಲಿ ನಿಂತು ಅಲ್ಲಿಗೆ ಬಂದು ಬೀಳುವ ಚೆಂಡನ್ನು ಹಿಡಿಯಲು ಕಾಯುತ್ತಿದ್ದರು. ಬಂದ ಚೆಂಡನ್ನು ಹಿಡಿದು ಆಟದ ಮೈದಾನದ ಮಧ್ಯಭಾಗಕ್ಕೆ ಹೊದ್ದರು. ಆದರೆ ಅದು ಹತ್ತು ಅಡಿ ಮುಂದಕ್ಕೂ ಹೋಗಲಿಲ್ಲ. ಮಧ್ಯ ಬಿಂದುವಿನಿಂದ ಚೆಂಡು ಒದೆಯುತ್ತಿದ್ದ ಲಿಂಗೇಗೌಡರು ಒಮ್ಮೆ ಚಂಡನ್ನು ಒದ್ದರೆ ಅದು ಮೇಲೆ ಹಾರಿ 50 (ಐವತ್ತು) ಅಡಿ ದೂರಕ್ಕೆ ಬೀಳುತ್ತಿತ್ತು. ಕರಿಯಪ್ಪನವರು ಮತ್ತು ಲಿಂಗೌಗೌಡರು ಆಟದ ವೈಖರಿಯನ್ನು ನೋಡಿ ಜನ ಗೊಳ್ ಎಂದು ನಗುತ್ತಿದ್ದರು.

ಸಾರ್ವಜನಿಕ ಸೇವೆಯ ಬಗ್ಗೆಯೂ ಒಲವಿದ್ದ ಗೌಡರು ತಾಲ್ಲೂಕಿನ ಅಭಿವೃದ್ಧಿ ಮತ್ತು ಮಹತ್ವದ ವಿಷಯಗಳ ಬಗ್ಗೆ ದೇಗುಲ ಮಠದ ಮುಮ್ಮಡಿ ನಿರ್ಮಾಣ ಸ್ವಾಮಿಗಳು ಮತ್ತು ಕರಿಯಪ್ಪನವರನ್ನು ಭೇಟಿಯಾಗಿ ಚರ್ಚಿಸಿ ತಾಲ್ಲೂಕಿನ ಅಭಿವೃದ್ಧಿಗೆ ಕಾರ್ಯ ಪ್ರವೃತ್ತರಾಗುತ್ತಿದ್ದರು. ಜನರ ಕಷ್ಟ - ಸುಖಗಳನ್ನು ವಿಚಾರಿಸಿ ಅವರಿಗೆ ಸಹಾಯ ಮಾಡುತ್ತಿದ್ದರು. ಇದು ಗೌಡರಿಗೆ ಸಾರ್ವಜನಿಕರ ಬಗ್ಗೆ ಇದ್ದ ಕಾಳಜಿಯನ್ನು ತೋರಿಸುತ್ತಿತ್ತು. ಒಮ್ಮೆ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಕನಕಪುರಕ್ಕೆ ಆಗಮಿಸಿದ ಸಂದರ್ಭದಲ್ಲಿ ಹಿಂದಿನ ದಿನ ಮಳೆ ಬಿದ್ದು

ಪಟ್ಟಣದಲ್ಲಿ ಕೆಸರಾಗಿತ್ತು. ಪಟ್ಟಣದ ಹಿಂದಿನ ಸುಂಕ ವಸೂಲಿಯ ಚೆಕ್‌ಪೋಸ್ಟ್ ಸಮೀಪದಿಂದ ಪಟ್ಟಣಕ್ಕೆ ಮುಖ್ಯಮಂತ್ರಿಗಳು ನಡೆದು ಬರಬೇಕಾಗಿದ್ದು, ಆ ಸಂದರ್ಭದಲ್ಲಿ ಗೌಡರಿಗೆ ಪಟ್ಟಣದ ರಸ್ತೆಗಳಿಗೆ ಡಾಂಭರೀಕರಣದ ರಸ್ತೆಗಳನ್ನು ಮಾಡಿಸಲು ಹೇಳಿದರು. ಆಗ ಲಿಂಗೇಗೌಡರು, 'ತಾವು ಪ್ರಭುಗಳು ಅಪ್ಪಣೆಯಾದರೆ ಇನ್ನು ಚೆನ್ನಾಗಿ ಕಾಂಕ್ರೀಟ್ ರಸ್ತೆಯನ್ನೇ ಮಾಡಿಸುತ್ತೇನೆ ಎಂದಾಗ, ಇವರ ಚಾಕಚಕ್ಯತೆ, ಸಮಯ ಪ್ರಜ್ಞೆ ಮತ್ತು ನಮ್ರತಾ ಭಾವಕ್ಕೆ ಮೆಚ್ಚಿದ ಮುಖ್ಯಮಂತ್ರಿಗಳು ಒಪ್ಪಿಗೆ ಇತ್ತರು. ಇದೇ ಸಮಯವನ್ನು ಉಪಯೋಗಿಸಿಕೊಂಡು ಗೌಡರು ಮಾಗಡಿಗೆ ಮಂಜೂರಾಗಿದ್ದ ಸಿಮೆಂಟ್ ರಸ್ತೆಯ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಂಡು ವಾಣಿ ಚಿತ್ರಮಂದಿರದಿಂದ ಈಗಿನ ಅಯ್ಯಪ್ಪಸ್ವಾಮಿ ದೇವಸ್ಥಾನದವರೆಗೆ ಕನಕಪುರದಲ್ಲಿ ಸಿಮೆಂಟ್ ರಸ್ತೆಯನ್ನು ನಿರ್ಮಾಣ ಮಾಡಿಸಿದ್ದರು.

ಲಿಂಗೇಗೌಡರಿಗಿಂತ ಹನುಮಂತಯ್ಯನವರು ಐದು ವರ್ಷ ಚಿಕ್ಕವರು, ಆದರೂ ಲಿಂಗೇಗೌಡರು ಅವರಿಗೆ ತುಂಬ ಗೌರವ ಕೊಡುತ್ತಿದ್ದರು. ಹನುಮಂತಯ್ಯನವರು ಲಿಂಗೇಗೌಡರ ಬಗ್ಗೆ ಅಷ್ಟೇ ಅಭಿಮಾನಿಯಾಗಿದ್ದರು.

18. ಮಾನವೀಯತೆಯನ್ನು ಮೆರೆದ ಗೌಡರು

'ಯಾರಿಗೆ ಯಾರುಂಟು ಎರವಿನ ಸಂಸಾರ, ನೀರ ಮೇಲಣಗುಳ್ಳೆ ನಿಜವಲ್ಲ ಹರಿಯೇ' ಎಂಬ ಪುರಂದರದಾಸರ ವಾಣಿಯಂತೆ 'ಈ ಜೀವ' ನೀರ ಮೇಲಣ ಗುಳ್ಳೆ, ಯಾವ ಗಳಿಗೆಯಲ್ಲಿ ಹೊಡೆಯುವುದೋ ಯಾರು ಬಲ್ಲರು.

ಕನಕಪುರದ ಈಗಿನ ಬಸ್ ನಿಲ್ದಾಣ ಸಂತೆ ಮಾಳವಾಗಿತ್ತು. ಪ್ರತೀ ಗುರುವಾರ ಸಂತೆಗೆ ಸುತ್ತಮುತ್ತಲ ಹಳ್ಳಿಗಳಿಂದ ಅಂದರೆ ಸಂಡಘಟ್ಟ, ದೊಡ್ಡಬೆಟ್ಟಹಳ್ಳಿ, ಚಿಕ್ಕಬೆಟ್ಟಳ್ಳಿಗಳಿಂದಲೂ ಜನ ಸಂತೆಗೆ ಬರುತ್ತಿದ್ದರು. ಒಂದು ದಿನ ಮಾಮೂಲಿನಂತೆ ಜನಸ್ಪಂದನ ಕಾರ್ಯಕ್ಕಾಗಿ ಶ್ರೀಯುತ ಎಂ. ಲಿಂಗೇಗೌಡರು ಬಂದು ಈಗಿನ ಬಸ್ ನಿಲ್ದಾಣದ ಬಳಿ ಶಂಕರರಾಯರ ಹೋಟೆಲ್ ಮುಂದೆ ಹಾಕಿದ್ದ ಕಲ್ಲು ಚಪ್ಪಡಿ ಬೆಂಚಿನ ಮೇಲೆ ಗೌಡರು ಕುಳಿತ್ತಿದ್ದರು. ಗೌಡರನ್ನು ಕಂಡು ತನ್ನ ಕಷ್ಟಕ್ಕೆ ಸಹಾಯ ಮಾಡಲು ಮನವಿ ಕೊಡಲು ಬಂದಿದ್ದ ಬೆಟ್ಟಳ್ಳಿ ಮೂಗೇಗೌಡರ ಕಡೆಯವರೊಬ್ಬರು ಇದ್ದಕ್ಕಿದ್ದಂತೆ ಕುಸಿದು ಬಿದ್ದರು. ಗೌಡರಿಗೆ ದಿಗ್ಭ್ರಮೆಯಾಗಿ ಕೂಡಲೇ ಅಲ್ಲಿಗೆ ಸರ್ಕಾರಿ ವೈದ್ಯರಾಗಿದ್ದ ಡಾ॥ ರಾಜಾರಾವ್‌ರವರನ್ನು ಕರೆಸಿದರು. ವೈದ್ಯರು ವ್ಯಕ್ತಿಯನ್ನು ಕೂಲಂಕುಷವಾಗಿ ಪರೀಕ್ಷೆ ಮಾಡಿ ಹೃದಯ ಸ್ಥಂಭನದಿಂದ ಮೃತಪಟ್ಟಿದ್ದಾರೆಂದು ತಿಳಿಸಿದರು. ಸತ್ತ ವ್ಯಕ್ತಿಯ ಕಡೆಯವರಾರೂ ಇಲ್ಲದಿದ್ದುದರಿಂದ ಮುಂದೇನು ಮಾಡಬೇಕೆಂದು ಯೋಚಿಸಿ, ಅರಣ್ಯ ಇಲಾಖೆಯ ಜೀಪನ್ನು ತರಿಸಿ ಸ್ವತಃ ಗೌಡರೇ ಶವವನ್ನು ಬೆಟ್ಟಳ್ಳಿಗೆ ಕೊಂಡೊಯ್ದು ಮೃತನ ಮನೆಯವರಿಗೆ ನಡೆದ ಘಟನೆಯನ್ನು ತಿಳಿಸಿ ತಾವೇ ಶವ ಸಂಸ್ಕಾರ ಮಾಡಿಸಿ ಮನೆಯವರಿಗೆ ಸಾಂತ್ವನ ಹೇಳಿ, ಬರಗಾಲವಾದ್ದರಿಂದ ಆ ಮನೆಯಲ್ಲಿ ಶವಸಂಸ್ಕಾರಕ್ಕೆ ಹಣವಿಲ್ಲದಿರುವುದನ್ನು ಸೂಕ್ಷ್ಮವಾಗಿ ಗಮನಿಸಿದ ಗೌಡರು ಅಂದಿನ ಖರ್ಚನ್ನು ತಾವೇ ಭರಿಸಿ ಬಂದು ಮಾನವೀಯತೆಯನ್ನು ಅನಾವರಣಗೊಳಿಸಿ ಹೃದಯ ವೈಶಾಲ್ಯತೆಯನ್ನು ಮೆರೆದು ಕರುಣಾಮಯಿ ದಿವಂಗತ ಎಂ. ಲಿಂಗೇಗೌಡರು ಊರುಗಳಲ್ಲಿ ಯಾರಾದರೂ ಗತಿಸಿದರೆ

ನಾಮಕಾವಸ್ಥೆಗೆ ಬಂದು ನೋಡಿ ತಮ್ಮ ಕೆಲಸ ಕಾರ್ಯಗಳಿಗೆ ತೆರಳುವ ಜನರು ಅನೇಕರಿದ್ದಾರೆ. ಪ್ರಸ್ತುತ ಎಂ.ಎಲ್.ಎ. ಆಗಿದ್ದ ವ್ಯಕ್ತಿ ಬಡವರು ಮತ್ತು ಬಡ ಕುಟುಂಬಗಳ ಬಗ್ಗೆ ಅವರಿಗಿದ್ದ ಕಾಳಜಿ ಅವಿಸ್ಮರಣೀಯವಾದದ್ದು.

19. ಸ್ವಜನ ಪಕ್ಷಪಾತಿಯಾಗಿರಲಿಲ್ಲ.

ಗೌಡರ ಮೈಸೂರು ಸರ್ಕಾರದ ಆಡಳಿತಾವಧಿಯಲ್ಲಿ ಶಾಸಕರಾಗಿದ್ದಾಗ ತಮ್ಮ ಕ್ಷೇತ್ರದ ನಿರುದ್ಯೋಗಿಗಳಿಗೆ ಕೆಲಸ ಕೊಡಿಸಿದ್ದರು. ಕೊಡಿಸುತ್ತಲೂ ಇದ್ದರು. ಆದರೆ ತಮ್ಮ ಮಗ ಎಂ.ಎಲ್. ನಾಗರಾಜುರವರ ಕೆಲಸಕ್ಕೆ ಶಿಫಾರಸ್ಸು ಮಾಡಿರಲಿಲ್ಲ. ಎಂ.ಎಲ್. ನಾಗರಾಜು ರವರು ಸ್ವಶಕ್ತಿಯಿಂದಲೇ ತಹಶೀಲ್ದಾರ್‌ರಾಗಿ ನಂತರ ಹಿರಿತನದ ಮೇಲೆ ಸಹಾಯಕ ಆಯುಕ್ತರಾಗಿ ಮತ್ತು ಜಿಲ್ಲಾಧಿಕಾರಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

20. ಗೌಡರು ನಿಷ್ಪಕ್ಷಪಾತವಾಗಿ ನ್ಯಾಯ ಮಾಡಿ ನೀಡುತ್ತಿದ್ದ ತೀರ್ಪು.

ಪೊಲೀಸರು ಮಳಗಾಳಿನಲ್ಲಿ ಮತ್ತು ನೆರೆಹೊರೆಯ ಗ್ರಾಮಗಳಲ್ಲಿ ವಿಚಾರಿಸುವ ಮುನ್ನ ಗೌಡರ ಬಳಿ ಬಂದು ವಿಚಾರ ವಿನಿಮಯ ಮಾಡಿ ರಾಜೀಕಬೂಲಿಯಿಂದ ಗೌಡರೇ ಪೊಲೀಸರ ಸಮ್ಮುಖದಲ್ಲಿ ತೀರ್ಪು ನೀಡುತ್ತಿದ್ದರು. ಇದು ಅವರು ಪುರಸಭ ಅಧ್ಯಕ್ಷರು ಮತ್ತು ಶಾಸಕರಾಗಿದ್ದಾಗ ನಡೆಯುತ್ತಿದ್ದ ಪ್ರಕ್ರಿಯೆ.

21. ಗೌಡರಿಗಿದ್ದ ರಾಜಕೀಯ ಧುರೀಣರ ಗೆಳೆತನ

ಗೌಡರಿಗೆ ಶ್ರೀಯುತ ಹೆಚ್.ಕೆ. ವೀರಣ್ಣಗೌಡರು, ವಿ. ವೆಂಕಟಪ್ಪನವರು, ಬಚ್ಚೇಗೌಡರ ಸಾಕು ತಂದೆ ಹೊಸಕೋಟೆಯ ಬಿ. ಚೆನ್ನಬೈರೇಗೌಡರು, ಬಿ.ಕೆ. ಪುಟ್ಟರಾಮಯ್ಯನವರು, ತುಮಕೂರಿನ ಬಿ. ಹುಚ್ಚೇಗೌಡರು, ಲೋಕಸಭಾ ಸದಸ್ಯರಾಗಿದ್ದ ಕೆ. ಲಕ್ಕಪ್ಪನವರು, ಪ್ರಾದೇಶಿಕ ಸಮಾಜ ಪಕ್ಷದಿಂದ ವಿರೋಧ ಪಕ್ಷದ ನಾಯಕರಾಗಿದ್ದ ಎಸ್. ಶಿವಪ್ಪನವರು, ಹಾಸನದ ವೈ. ಧರ್ಮಪ್ಪನವರು ಮತ್ತು ಜೆ. ಹಿಮಾಮ್ ಸಾಹೇಬರು, ಶಿವಮೊಗ್ಗದ ಟಿ.ಡಿ. ನಾಗಣ್ಣನವರು, ಬೆಂಗಳೂರಿನ ಮೇಯರ್ ಕೆ.ಎಂ. ನಾಗಣ್ಣನವರು, ನಂದಿ ಪಿಕ್ಚರ್ಸ್ ದೊಡ್ಡಬಳ್ಳಾಪುರ, ಮಾಗಡಿಯ ಸಿಂಗ್ರಿಗೌಡರು, ಕೆ.ಎನ್. ಗುರುಸ್ವಾಮಿಯವರು, ನೆಟ್ಟಕಲ್ಲಪ್ಪನವರು, ನ್ಯಾಯಾಧೀಶರಾಗಿದ್ದ ಹೊಂಬೇಗೌಡರು, ಕೆಂಗಲ್ ಹನುಮಂತಯ್ಯನವರು, ಶಾಂತವೇರಿ ಗೋಪಾಲಗೌಡರು, ಜೆ.ಹೆಚ್. ಪಟೇಲ್‌ರವರು, ಕಾಗೋಡು ತಿಮ್ಮಪ್ಪನವರು, ಭೂಪಾಳಂ ಚಂದ್ರಶೇಖರಯ್ಯನವರು, ಎಸ್.ಎಂ. ಕೃಷ್ಣರವರ ತಂದೆ ಸೋಮನಹಳ್ಳಿ ಎಸ್.ಸಿ. ಮಲ್ಲಯ್ಯನವರು, ಶ್ಯಾಮ್ ಪ್ರಕಾಶ್ ಮುಖರ್ಜಿರವರು, ವೀರ ಸಾವರ್ಕರ್‌ರವರೊಡನೆ ಗೆಳೆತನವಿತ್ತು.

22. ಕರಿಯಪ್ಪನವರು ಮತ್ತು ವಿದ್ಯಾರ್ಥಿಗಳಿಗೆ ಗೌಡರ ಮನೆಯಿಂದ ಊಟದ ವ್ಯವಸ್ಥೆ.

ಗ್ರಾಮ ವಿದ್ಯಾ ಪ್ರಚಾರಕ ಸಂಘ ಪ್ರಾರಂಭವಾಗುವುದಕ್ಕೆ ಮುನ್ನ ದಯಾನಂದ ವಸತಿಯಲ್ಲಿ ಊಟದ ವ್ಯವಸ್ಥೆ ಪ್ರಾರಂಭವಾಗಿರಲಿಲ್ಲ. ಆ ಸಂದರ್ಭದಲ್ಲಿ ಗೌಡರು ಕರಿಯಪ್ಪನವರಿಗೆ ಮನೆಯಿಂದ ಅವರ ತಮ್ಮ ಮಂಚೇಗೌಡರ ಮೂಲಕ ಊಟ ಕಳುಹಿಸುತ್ತಿದ್ದರು. ಹೊಳೆ

ಬಂದಾಗ ಮಂಚೇಗೌಡರು ವಿರುಪಸಂದ್ರಕ್ಕೆ ಹೋಗಿ ಅಲ್ಲಿ ಹೊಳೆಗೆ ಇಳಿದು ಈಜಿಕೊಂಡೆ ಹೋಗಿ ಈಗಿನ ಹುಚ್ಚಪ್ಪನವರ ಛತ್ರದ ಬಳಿ ಇರುವ ದೇವಸ್ಥಾನದ ಪಕ್ಕ ಬೂರುಗದ ದೊಡ್ಡ ಮರದ ಸಂದಿನಲ್ಲಿ ವಸತಿಗೆ ಹೋಗಿ ಊಟ ಕೊಡುತ್ತಿದ್ದರು.

ಹೊಸದಾಗಿ ವಿದ್ಯಾರ್ಥಿನಿಲಯ ಪ್ರಾರಂಭವಾದಾಗ ಅಲ್ಲಿದ್ದ ಸುಮಾರು 8–10 ವಿದ್ಯಾರ್ಥಿಗಳು ಗೌಡರ ಮನೆಯಲ್ಲಿ ಹಬ್ಬ–ಹರಿದಿನ ನಡೆಯುತ್ತಿದ್ದ ವೇಳೆ ಅಲ್ಲಿಗೆ ಹೋಗಿ ಊಟ ಮಾಡುತ್ತಿದ್ದರು. ಇದು ಗೌಡರು ಕರಿಯಪ್ಪನವರಿಗೆ ಪರೋಕ್ಷವಾಗಿ ನೆರವಾಗಿದ್ದರು ಎಂಬುದಕ್ಕೆ ಒಂದು ನಿದರ್ಶನ. ಅದೇ ರೀತಿಯಲ್ಲಿ ಅಭಿಮಾನಿಗಳು ಕರಿಯಪ್ಪನವರನ್ನು ಊಟಕ್ಕೆ ಆಹ್ವಾನಿಸಿದರೆ ಲಿಂಗೇಗೌಡರನ್ನು ಕರೆಯಿಸಿ ಎಂದು ಹೇಳಿ ಕರೆಸಿಕೊಂಡು ಜೊತೆಯಾಗಿ ಊಟಕ್ಕೆ ಹೋಗುತ್ತಿದ್ದರು.

23. ಗೌಡರು ಬಹುಮುಖ ಪ್ರತಿಭೆಯುಳ್ಳವರಾಗಿದ್ದರು.

ವ್ಯವಸಾಯ, ರಾಜಕೀಯ, ಸಾಂಸ್ಕೃತಿಕ ಕಲೆಗಳು ಗೌಡರಿಗೆ ಕರಗತವಾಗಿದ್ದವು. ಸ್ವತಃ ಕಲಾವಿದರಾಗಿದ್ದ ಗೌಡರು ಸತ್ಯವಾನ್ ಸಾವಿತ್ರಿ ನಾಟಕದಲ್ಲಿ ಯಮನ ಪಾತ್ರ ವಹಿಸಿದ್ದರು. ಹೋಟೆಲ್ ಸುಬ್ಬಯ್ಯರ್‌ರವರು ಯಮಕಿಂಕರ ಪಾತ್ರವಹಿಸಿದ್ದರು. ಆಗಿನ ಕಾಲದಲ್ಲಿ ಹೆಣ್ಣು ವೇಷವನ್ನು ಗಂಡಸರೇ ಹಾಕಬೇಕಿತ್ತು. ಆದುದರಿಂದ ಸತ್ಯವಾನ್ ಸಾವಿತ್ರಿ ಪಾತ್ರದ ವೇಷವನ್ನು ಸೈಕಲ್ ಶಾಪ್ ಮುದ್ದಪ್ಪನವರು ಹಾಕಿದ್ದರು. ಯಮನ ಪಾತ್ರಕ್ಕೆ ಹೇಳಿ ಮಾಡಿಸಿದಂತಹ ಆಕರ್ಷಣೀಯ ಶರೀರ ಗೌಡರಿಗಿತ್ತು. ಬಲ ಹೆಗಲ ಮೇಲೆ ಗದೆಹೊತ್ತು, ಎಡಗೈಯಲ್ಲಿ ಯಮಪಾಶವನ್ನು ಹಿಡಿದು ರಂಗ ಪ್ರವೇಶ ಮಾಡಿದ ಕೂಡಲೇ ನೆರೆದಿದ್ದ ಪ್ರೇಕ್ಷಕರು ಹೌ–ಹಾರುತ್ತಿದ್ದರು. ಸತ್ಯವಾನನ ಪ್ರಾಣ ಹೋಗಿತ್ತು. ಯಮಪಾಶ ಅವನ ಕೊರಳಿಗೆ ಬಿದ್ದಿತ್ತು. ಆ ಸಮಯದಲ್ಲಿ ಯಮ ಸಾವಿತ್ರಿಯನ್ನು ಕುರಿತು ಬೇಕಾದ ವರವನ್ನು ಬೇಡಿಕೋ; ಕೊಡುತ್ತೇನೆ ಎಂದಾಗ ಸಾವಿತ್ರಿ ಪತಿಯೇ ಇಲ್ಲದ ಮೇಲೆ ಪುತ್ರನನ್ನು ಹೇಗೆ ಕರುಣಿಸುವೆ ಎಂದು ಪ್ರಶ್ನಿಸಿದಾಗ ಯಮನ ಪಾತ್ರಧಾರಿಯಾಗಿದ್ದ ಗೌಡರು ಕಕ್ಕಾಬಿಕ್ಕಿಯಾಗಿ ನಿಂತಿದ್ದರು. ಇದು ಅವರ ನಟನೆಗೆ ಸವಾಲಾಗಿ ಪರಿಣಮಿಸಿತ್ತು.

24. ಜನ ಸಂಘಟನೇ ಚಾತುರ್ಯ

ಗೌಡರು ಸಾಮಾನ್ಯರ ಜೊತೆ ಸಾಮಾನ್ಯರಾಗಿ ವಿಶ್ವಾಸದಿಂದ ಬೆರೆಯುತ್ತಿದ್ದರು. ಜನ ಸಂಘಟನೆಯಲ್ಲಿ ಗೌಡರು ಬಳಸುತ್ತಿದ್ದ ಚತುರೋಪಾಯ ವಿಶೇಷವಾಗಿತ್ತು. 'ಧರೆಯೋಳ್ ನಾನಾ ಚಮತ್ಕಾರಮಮ್ ಅರಿಯಬಲ್ಲೊಡೆ ಮಂತ್ರಿಯಾಗು' ಎಂಬ ಚಾಣಕ್ಯ ಸೂತ್ರದಂತೆ ಗೌಡರು ತಮ್ಮದೇ ಆದ ಚಮತ್ಕಾರವನ್ನು ಜನ ಸಂಘಟನೆಗೆ ಬಳಸುತ್ತಿದ್ದರು ಎಂಬುದಕ್ಕೆ ಉದಾಹರಣೆ ತಾಲ್ಲೂಕಿನ ಪ್ರತಿಯೊಂದು ಹೋಬಳಿಯ ಮುಖ್ಯಸ್ಥರನ್ನು ತಮ್ಮಲ್ಲಿಗೆ ಆಹ್ವಾನಿಸಿ ಮುಂದೆ ಪ್ರತಿಯೊಂದು ಗ್ರಾಮಗಳ ಅಭಿವೃದ್ಧಿ, ಹೋಬಳಿಯ ಅಭಿವೃದ್ಧಿ ಆಗಬೇಕಾದರೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದು ಅವರಿಗೆ ಮನವರಿಕೆ ಮಾಡಿಕೊಟ್ಟು ಹೆಚ್ಚು ಹೆಚ್ಚು ಜನರು ಸಂಘಟಿತರಾಗಬೇಕೆಂದು ಆ ಸಂಘಟನೆಗೆ ತಾವೆಲ್ಲರೂ ಶ್ರಮಿಸಬೇಕೆಂದು ಹೇಳುತ್ತಿದ್ದರು. ಅವರ ಕೋರಿಕೆಯಂತೆ ಗೌಡರ ಪಕ್ಷಕ್ಕೆ ಜನರು ಆಕರ್ಷಿತರಾಗಿ ತಂಡೋಪ ತಂಡವಾಗಿ ಸೇರಲು ಸಾಧ್ಯವಾಯಿತು. ಇದು ಅವರ ಜನ ಸಂಘಟನಾ

ಚಾತುರ್ಯಕ್ಕೆ ಸಾಕ್ಷಿಯಾಯಿತು.

25. ಗೌಡರು ಸರಳ ಜೀವಿಗಳಾಗಿದ್ದರು ಎಂಬುದಕ್ಕೆ ಉದಾಹರಣೆ

ಗೌಡರು ಶಾಸಕರಾಗಿದ್ದರೂ ಸಹ ತಮ್ಮ ಊರು ಮಳಗಾಳಿನ ನಾಡ ಹೆಂಚಿನ ಮನೆಯಲ್ಲೇ ವಾಸವಾಗಿದ್ದರು. ಊರಿನ ಸಾಮಾನ್ಯ ಜನರಂತೆ ಅರ್ಧ ತೋಳಿನ ಅಂಗಿ, ಪಂಚೆ, ತಲೆಗೆ ರುಮಾಲನ್ನು ಕಟ್ಟಿಕೊಂಡು ಹೊಲ – ಗದ್ದೆಗಳಲ್ಲಿ ಸಾಮಾನ್ಯ ರೈತರಂತೆ ಕೆಲಸ ಮಾಡುತ್ತಿದ್ದರು. ಊರಿನಲ್ಲಿ ನಡೆಯುವ ಗ್ರಾಮದ ಹಬ್ಬಗಳಾದ ಊರದೇವತೆ ಮರಸನಾಡಮ್ಮನವರ ಜಾತ್ರೆ, ಸಂಕ್ರಾಂತಿ ಹಬ್ಬಗಳನ್ನು ಸಡಗರ ಸಂಭ್ರಮದಿಂದ ತಮ್ಮ ಗ್ರಾಮದವರೊಡನೆ ಬೆರೆತು ಆಚರಿಸುತ್ತಿದ್ದರು ಎಂಬುದಕ್ಕೆ ಸಂಕ್ರಾಂತಿ ಹಬ್ಬದ ದಿನದಂದು ತಮ್ಮ ಮನೆಯ ಹಸುಗಳನ್ನು ಕಿಚ್ಚುಹಾಯಿಸಲು ಸಿದ್ಧಗೊಳಿಸಿ ಮನೆಯ ಮುಂದೆ ನಿಲ್ಲಿಸಿದ್ದರು. ಅದಕ್ಕೆ ಸಾಕ್ಷಿಯಾಗಿ ಹಸುಗಳನ್ನು ಅಲಂಕರಿಸಿ ನಿಲ್ಲಿಸಿದ್ದ ಚಿತ್ರವನ್ನು ಈ ಗ್ರಂಥದಲ್ಲಿ ಮುದ್ರಿಸಿದೆ.

ಅನಂತರ ಅವರ ಮಕ್ಕಳಲ್ಲಿ ಒಬ್ಬರು ಕನಕಪುರದಲ್ಲಿ ನಿವೇಶನವನ್ನು ಕೊಂಡು ಒಂದು ಮನೆ ಕಟ್ಟಿದರು, ಅಧಿಕಾರವಿದ್ದರು ಗೌಡರು ತಮ್ಮ ಸ್ವಂತಕ್ಕೆ ಒಂದು ನಿವೇಶನವನ್ನೂ ಮಾಡಿಕೊಂಡಿರಲಿಲ್ಲ. ಇದು ಅವರ ವ್ಯಕ್ತಿತ್ವ, ಸರಳ ಜೀವನ ಮತ್ತು ಅವರ ವಿಶಾಲ ಯೋಚನೆ ಮತ್ತು ಯೋಜನೆಗಳಿಗೆ ಉದಾಹರಣೆಯಾಗಿದೆ.

26. ಗೌಡರಿಗೆ ಸಂದ ಬಿರುದು – ಬಹುಮಾನಗಳು

ಶ್ರೀಯುತ ಗೌಡರಿಗೆ ಬಾಲ್ಯದಲ್ಲಿ ಫುಟ್ಬಾಲ್, ವಾಲಿಬಾಲ್, ಈಜುವಿಕೆ ಇವುಗಳಲ್ಲಿ ಹೆಚ್ಚು ಆಸಕ್ತಿ ಇತ್ತು. ಇವರು ವಯಸ್ಕರಾದಾಗ ಹಾಸ್ಟೆಲ್ ಕರಿಯಪ್ಪನವರು ವಿದ್ಯಾರ್ಥಿಗಳಿಗೆ ಈಗಿನ ಕಾಳಮ್ಮ ದೇವಸ್ಥಾನದ ಪಕ್ಕದಲ್ಲಿರುವ ಕಲ್ಯಾಣಿಯಲ್ಲಿ ಈಜು ಕಲಿಸುತ್ತಿದ್ದರು.

ಮಳಗಾಳಿನಿಂದ ಕನಕಪುರಕ್ಕೆ ಸೇತುವೆ ಇರದಿದ್ದ ಕಾಲದಲ್ಲಿ ಗೌಡರು ಬಾಲ್ಯದಲ್ಲಿ ಶಾಲೆಗೆ ಬರುವಾಗ ಈಜುಬುರುಡೆ ಕಟ್ಟಿಕೊಳ್ಳದೆ ಅಂತರ್‌ಮುಖಿಯಾಗಿ ಈಜುತ್ತಾ ದಡಸೇರಿ ಶಾಲೆಗೆ ಹೋಗುತ್ತಿದ್ದರು. ಕೆಲವೊಮ್ಮೆ ಶ್ರೀ ದೇಗಲಮಠ ಕಡೆಯಿಂದ ಈಜಿಕೊಂಡು ಬಂದು ಮಳಗಾಳು ದಡವನ್ನು ಸೇರುತ್ತಿದ್ದರು. ಒಮ್ಮೆ ಇವರು ಹೊಳೆಯಲ್ಲಿ ಈಜಿಕೊಂಡು ಬರುತ್ತಿರುವಾಗ ಪಕ್ಕದಲ್ಲಿ ತೇಲಿ ಬರುತ್ತಿದ್ದ ಹೆಬ್ಬಾವನ್ನು ಮರವೆಂದು ತಿಳಿದು ತಬ್ಬಿಕೊಂಡು ಬರುತ್ತಿರುವಾಗ ಹಾವೆಂಬುದನ್ನು ಸೂಕ್ಷ್ಮವಾಗಿ ಗಮನಿಸಿ ಅದನ್ನು ತಳ್ಳಿ ಈಜುತ್ತಾ ದಿವಂಗತ ಹುಚ್ಚಪ್ಪನವರ ಮಂಟಪದ ಸೋಪಾನ ಕಟ್ಟೆಯ ಬಳಿ ಬಂದು ಸೇರುತ್ತಿದ್ದರು. ಮತ್ತೊಂದು ದಿನ ಒಂದು ಹೆಬ್ಬಾವು ಹುಚ್ಚಪ್ಪನವರ ಮಂಟಪದ ಬಳಿ ಇದ್ದ ಬೂರುಗದ ಮರವನ್ನು ಏರಿತ್ತು ಅದನ್ನು ಚಾಕು ಚಕ್ಯತೆಯಿಂದ ಜೋಪಾನವಾಗಿ ಇಳಿಸಿ ಹೊಳೆಯಲ್ಲಿ ತೇಲಿಹೋಗುವಂತೆ ಮಾಡಿದರು.

ಒಮ್ಮೆ ಇವರು ರಾಮನಗರಕ್ಕೆ ಹೋಗಿದ್ದಾಗ ಗೆಳೆಯರು ಇವರನ್ನು ಪುಸಲಾಯಿಸಿ ರಾಮನಗರದ ಈಗಿನ ಸೇತುವೆ ಬಳಿಯಿಂದ ಮಳಗಾಳಿನವರೆಗೆ ಹೊಳೆಯಲ್ಲಿ ಈಜಿಕೊಂಡು ಹೋಗಲು ಸಾಧ್ಯವೇ ಎಂದಾಗ ಗೌಡರು ಗಾಬರಿಪಡದೆ ಧೈರ್ಯವಾಗಿ ರಾಮನಗರದ ಸೇತುವೆ ಬಳಿಯಿಂದ ಈಜುತ್ತಾ ಬಂದು ಮಳಗಾಳು

ದಡವನ್ನು ಸೇರಿ ಊರಿಗೆ ಹೋದರು.

ಈಜುವುದರಲ್ಲಿ ಗೌಡರಿಗಿದ್ದ ಅನುಭವದ ಮುಂದೆ ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಗೆ ಈಜು ಕಲಿಸಿಕೊಡುವಂತೆ ಗೌಡರಿಗೆ ಸೂಚಿಸಿದ್ದರು. ಅವರ ಸೂಚನೆಯಂತೆ ಗೌಡರು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಗೆ ಮೈಸೂರಿನ ಕುಕ್ಕನಹಳ್ಳಿ ಕೆರೆಯಲ್ಲಿ ಈಜುವುದನ್ನು ಕಲಿಸಿಕೊಟ್ಟರು. ಒಡೆಯರ್‌ರವರು ಸಮರ್ಪಕವಾಗಿ ಈಜುವುದನ್ನು ಕಲಿತ ಮೇಲೆ 'ಗೌಡರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಗುರುಕಾಣಿಕೆಯಾಗಿ ಒಂದು ಬೆಳ್ಳಿ ಬಿಂದಿಗೆ, ಒಂದು ಬೆಳ್ಳಿ ಗಟ್ಟಿ ಕೊಡುವುದರ ಜೊತೆಗೆ ಗೌಡರು ರಾಜ್ಯಮಟ್ಟದ ಈಜುಗಾರರು ಎಂಬ ಬಿರುದನ್ನು ಕೊಡುವುದರ ಜೊತೆಗೆ ಚಿನ್ನದ ಪದಕವನ್ನು ಬಹುಮಾನವಾಗಿ ಕೊಟ್ಟರು'. ಆ ಪದಕವು ಗೌಡರು ದಾಂಪತ್ಯ ಜೀವನಕ್ಕೆ ಕಾಲಿಟ್ಟಾಗ ಅವರ ಪತ್ನಿಯ ಕೊರಳು ಸೇರಿತು. ತದ ನಂತರ ಜಯಚಾಮರಾಜೇಂದ್ರ ಒಡೆಯರ್ ರವರ ಕೋರಿಕೆ ಮೇರೆಗೆ ಗೌಡರು ಕುಕ್ಕನಹಳ್ಳಿ ಕೆರೆಯಲ್ಲಿ ಬಾಳೆ ಎಲೆಯ ಮೇಲೆ ಅಂತರ್ ಮುಖಿಯಾಗಿ ಮಲಗಿ ಈಜಿದ್ದನ್ನು ನೋಡಿ ಸಂತೋಷಗೊಂಡು ಜಯಚಾಮರಾಜೇಂದ್ರ ಒಡೆಯರ್ ರವರು ಗೌಡರಿಗೆ ವೈಯಕ್ತಿಕವಾಗಿ ಬೆಲೆ ಬಾಳುವ ಬಹುಮಾನವನ್ನು ಕೊಟ್ಟು ಬೆನ್ನು ತಟ್ಟಿದ್ದರು.

27. ಗೌಡರು ಅಲಂಕರಿಸಿದ್ದ ಹುದ್ದೆಗಳು

1. ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಸ್ಥಾನ
2. ಪುರಸಭಾ ಅಧ್ಯಕ್ಷ ಸ್ಥಾನ
3. ಮಾರುಕಟ್ಟೆ ಸಹಕಾರಿ ಸಂಘದ ಅಧ್ಯಕ್ಷ ಸ್ಥಾನ
4. ಮುಜರಾಯಿ ದೇವಸ್ಥಾನಗಳಿಗೆ ಸಂಯೋಜನಾಧಿಕಾರಿ ಸ್ಥಾನ
5. ಬಿ.ಎ. ಪದವಿ ಪಡೆದ ಮೇಲೆ ರಾಷ್ಟ್ರೀಯ ಜೀವ ವಿಮೆ ಕಂಪನಿಯ ವಿಶೇಷ ವ್ಯವಸ್ಥಾಪಕರ ಸ್ಥಾನ.
6. ತಾಲ್ಲೂಕು ಮಟ್ಟದಲ್ಲಿ ವಿದ್ಯಾರ್ಥಿ ವೇತನದ ಅಧ್ಯಕ್ಷ ಸ್ಥಾನ.
7. ಮೈಸೂರು ಶಾಸನ ಸಭೆಯ ಸದಸ್ಯರಾಗಿದಾಗ ಶಾಸನ ಸಮನ್ವಯ ಸಮಿತಿ ಅಧ್ಯಕ್ಷ ಸ್ಥಾನ.
8. ಹಿಂದೂ ಮಹಾಸಭೆ ಅಧ್ಯಕ್ಷ ಸ್ಥಾನ.
9. ಜಿಲ್ಲಾ ಬೋರ್ಡ್ ಅಧ್ಯಕ್ಷ ಸ್ಥಾನ.
10. ಶಾಸಕರು

ಮೇಲ್ಕಂಡ ಹುದ್ದೆಗಳು ಗೌಡರ ವ್ಯಕ್ತಿತ್ವಕ್ಕೆ ಸಂದ ಗೌರವವಾಗಿದ್ದವು.

28. ಗೌಡರು ಧರಿಸುತ್ತಿದ್ದ ಉಡುಗೆ-ತೊಡುಗೆಗಳು

ಬಾಲ್ಯದಲ್ಲಿ ಚಡ್ಡಿ, ಅಂಗಿ, ಮೇಲ್ವಸ್ತ್ರ (ಚೌಕ) ವನ್ನು ಹಾಕಿಕೊಳ್ಳುತ್ತಿದ್ದರು. ವಯಸ್ಕರಾದ ಮೇಲೆ ಮನೆಯಲ್ಲಿ ಪಂಚೆ ಅರ್ಧ ತೋಳಿನ ಅಂಗಿ, ಮೇಲೊದ್ದಿಕೆಯನ್ನು (ಚೌಕ) ಧರಿಸುತ್ತಿದ್ದರು. ಪುರಸಭಾ ಅಧ್ಯಕ್ಷರಾಗಿದ್ದಾಗ ಕಚ್ಚೆ-ಪಂಚೆ, ತುಂಬು ತೋಳಿನ ಅಂಗಿ, ಕಪ್ಪು ಬಣ್ಣದ ಕೋಟು, ಬಿಳಿ ಬಣ್ಣದ ಮೇಲೊದ್ದಿಕೆಯನ್ನು ಧರಿಸುತ್ತಿದ್ದರು.

ಶಾಸಕರಾದ ಮೇಲೆ ಬಿಳಿ ಬಣ್ಣದ ಪ್ಯಾಂಟು, ತುಂಬು ತೋಳಿನ ಶರ್ಟು, ಕಪ್ಪು ಬಣ್ಣದ ಕೋಟು, ಖಾನ್‌ಪುರ ಪಾದರಕ್ಷೆಗಳು, ಜರೀ ಪೇಟವನ್ನು ಧರಿಸುತ್ತಿದ್ದರು. ಗೌಡರ ಎಲ್ಲಾ ಉಡುಗೆ – ತೊಡುಗೆಗಳು ಜನರಿಗೆ ಆಕರ್ಷಣೀಯವಾಗಿದ್ದವು.

29. ಗೌಡರ ಅವಸಾನ

'ಹುಟ್ಟು ಆಕಸ್ಮಿಕ ಸಾವು ಅನಿವಾರ್ಯ' ಹುಟ್ಟು ಸಾವಿನ ಮಧ್ಯೆ ಮೂರು ದಿನದ ಬಾಳಿನಲ್ಲಿ ವ್ಯಕ್ತಿ ಮಾಡುವ, ಬಾಳುವ ರೀತಿ – ನೀತಿಗಳು ಅವು ಒಳ್ಳೆಯದಾಗಿದ್ದರೆ, ಜನರಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸುವಂತಿದ್ದರೆ ಅವು ಜನತೆಯ ಮನದಲ್ಲಿ ಶಾಶ್ವತ ಸ್ಥಾನವನ್ನು ಪಡೆಯುತ್ತವೆ. ಇವು ಗೌಡರು ಹುಟ್ಟಿದಂದಿನಿಂದ ಶಾಸಕರಾಗಿದ್ದ ನಂತರ ಅವಸಾನವಾಗುವರೆಗೆ ಅವರಲ್ಲಿದ್ದ ಅಘಣ್ಯ ಶ್ರೇಷ್ಠ ಗುಣಗಳು ಇಂದಿಗೂ ಸಾಕ್ಷಿಯಾಗಿ ಉಳಿದಿವೆ.

ಗೌಡರು ದಿನಾಂಕ : 13–09–1963 ರಂದು ಅವಸಾನವಾದ ದಿನ ಪೂಜ್ಯ ಶ್ರೀ ಎಸ್. ಕರಿಯಪ್ಪನವರೇ ಸ್ವತಃ ನಿಂತು ಅವರ ಅಂತ್ಯ ಸಂಸ್ಕಾರದಿಂದ – ಉತ್ತರ ಕ್ರಿಯಾಧಿ ಭೂಶಾಂತಿ ಕಾರ್ಯದವರೆಗೆ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಿದ್ದರು. ಕರಿಯಪ್ಪನವರು ಮತ್ತು ಲಿಂಗೇಗೌಡರು ಅವಸಾನವಾಗುವವರೆಗೆ 'ಎರಡು ದೇಹ ಒಂದೇ ಉಸಿರು ಎಂಬಂತ್ತಿದ್ದರು'. ಗೌಡರು ಅವಸಾನವಾದ ದಿನ ತಾಲ್ಲೂಕಿನ ಜನತೆ ಅವರು ಮಾಡಿದ ಸೇವೆಯನ್ನು ಸ್ಮರಿಸಿ ಭಕ್ತಿಪೂರಕವಾಗಿ ಅಶೃತರ್ಪಣವನ್ನರ್ಪಿಸಿದರು.